## ಶ್ರೀಸರ್ವಮೂಲ ಸಂದೇಶ

**ಸಂತತಂ ಚಿಂತಯೇನಂತಂ ಅಂತಕಾಲೇ ವಿಶೇಷತಃ ।**
**ನೈವೋದಾಪುರ್ಗೃಣಂತೋಽಂತಂ ಯದ್ಗುಣಾನಾಮಜಾದಯಃ ॥**

ನಾರಾಯಣ ಎಲ್ಲಾ ಕಾಲಗಳಲ್ಲಿ ಎಲ್ಲಾ ದೇಶಗಳಲ್ಲಿ ವ್ಯಾಪ್ತನಾಗಿದ್ದು ಸಮಸ್ತ ಕಲ್ಯಾಣಗುಣಗಳಿಂದ ಪೂರ್ಣನಾಗಿರುವುದರಿಂದ ಅನಂತನೆಂದು ಕರೆಯಲ್ಪಡುವನು. ಆದ್ದರಿಂದಲೇ ಬ್ರಹ್ಮಾದಿದೇವತೆಗಳು ಕೂಡಾ ಅವನ ಗುಣಗಳನ್ನು ಸ್ತುತಿಸಿ ಮುಗಿಸಲಾರರು. ಅಂತಹ ಸರ್ವಸ್ವಾಮಿಯಾದ ನಾರಾಯಣನನ್ನು ಅಂತ್ಯಕಾಲದಲ್ಲಿ ಅವನ ವಿಶೇಷ ಸ್ಮರಣೆ ಬರುವುದಕ್ಕಾಗಿ ಈಗ ನಿರಂತರ ಸ್ಮರಿಸು.

**–ತ್ರೈಲೋಕ್ಯಾಚಾರ್ಯ ಶ್ರೀಮದಾನಂದತೀರ್ಥ ಭಗವತ್ಪಾದರು**

**ಸಂಪುಟ–8 ಸಂಚಿಕೆ–7 ವಿರೋಧಿ ಸಂ.॥ ಜ್ಯೇಷ್ಠಾ–ಆಷಾಢ ಜುಲೈ 2009**

ಸಂಸ್ಥಾಪಕರು:

**ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು**

**ಶ್ರೀವಿದ್ಯಾಮಾನ್ಯ ಪ್ರಕಾಶನ**

ಶ್ರೀಮದ್ ಹೃಷೀಕೇಶತೀರ್ಥ ಸ್ವಾಮಿಯರ್ ಸ್ಮಾರಕ ಟ್ರಸ್ಟ್ (ರಿ.)

ಶ್ರೀ ಪಲಿಮಾರು ಹೃಷೀಕೇಶಮಠ, ಉಡುಪಿ.

**www.palimarumatha.org**

**www.livepravachana.com**

**E-MAIL**

**sarvamoola@udupishripalimarumatha.org**

## ವಿಷಯಾನುಕ್ರಮಣಿಕೆ


| | | |
|---|---|---|
| **ಗೀತಾಮೃತ** | ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರು | 1 |
| **ವಿದುರನೀತಿ** | ಶ್ರೀ ವಿಶ್ವಪ್ರಿಯತೀರ್ಥ ಶ್ರೀಪಾದರು | 3 |
| **ತೈತ್ತರೀಯೋಪನಿಷತ್** | ವಿ॥ ಬನ್ನಂಜೆ ಗೋವಿಂದಾಚಾರ್ಯ | 5 |
| **ಹರಿಭಕ್ತಿಸಾರ** | ವಿ॥ ಹಯವದನ ಪುರಾಣಿಕ | 7 |
| **ಅವಲೋಕನ** | ಸಗ್ರಿ ರಾಘವೇಂದ್ರ ಉಪಾಧ್ಯಾಯ | 10 |
| **ಭಾರತಭಾವದರ್ಪಣ** | ವಿ॥ ರಾಮವಿಟ್ಠಲಾಚಾರ್ಯ | 14 |
| **ಕಠೋಪನಿಷತ್** | ಡಾ॥ ಎನ್. ವೆಂಕಟೇಶ್ ಆಚಾರ್ಯ | 20 |
| **ನಾರಾಯಣವರ್ಮ** | ವಿ॥ ಬೆ.ನಾ. ವಿಜಯೀಂದ್ರಾಚಾರ್ಯ | 22 |
| **ಜೀವನಯಜ್ಞ** | ಶ್ರೀ ಸುನಂದಕೀ | 24 |
| **ಮಾರ್ಕಂಡೇಯಪುರಾಣ** | ವಿ॥ ಅದ್ವೇ ಲಕ್ಷ್ಮೀಶಾಚಾರ್ಯ | 27 |
| **ಮುಖಪುಟ ಲೇಖನ** | ಶ್ರೀ ಬಿ. ಶ್ರೀನಿವಾಸಭಟ್ | 29 |
| **ಮಧ್ವ ಚರಿತ್ರೆ** | ವಿ॥ ಅನಂತಕೃಷ್ಣಾಚಾರ್ಯ | 31 |
| **ವಿಷ್ಣುಪುರಾಣ** | ಸ್ಫೂರ್ತಿ | 33 |
| **ವಿಶ್ವನ(ದ)ಲ್ಲಿ ವಿಶ್ವರೂಪದ(ನ) ದರ್ಶನ**–ಶ್ರೀ ಡಿ. ಗುರುಪ್ರಸಾದ್ ಭಟ್ | | 35 |
| **ನೆನಪಿನ ಅಂಗಳ** | ವಿ॥ ಶಂಕರನಾರಾಯಣಾಚಾರ್ಯ | 37 |



**ಪ್ರಕಾಶಕರು**
ಶ್ರೀ ಶಿಬರೂರು ವೇದವ್ಯಾಸ ತಂತ್ರಿ, ಉಡುಪಿ

**ಪ್ರಧಾನ ಸಂಪಾದಕರು**
ವಿಸಗ್ರಿ ರಾಘವೇಂದ್ರ ಉಪಾಧ್ಯಾಯ, ಉಡುಪಿ



**ಸಂಪಾದಕ ಮಂಡಳಿ:**
ವಿ॥ ಬಲರಾಮ ಭಟ್ಟ, ಉಡುಪಿ
ವಿ॥ ಮೋಹನಾಚಾರ್ಯ ಬೆಂಗಳೂರು
ವಿ॥ ಗಿರೀಶ ಉಪಾಧ್ಯಾಯ, ಕುತ್ಯಾರು

**ಸಲಹಾ ಮಂಡಳಿ**
ಶ್ರೀ ರಘುಪತಿ ತಂತ್ರಿ, ಬೆಂಗಳೂರು
ಶ್ರೀ ಲಕ್ಷ್ಮೀನಾರಾಯಣ ಶರ್ಮ ಉಡುಪಿ
ಶ್ರೀ ಹರ್ಷ ಬೆಂಗಳೂರು



ಮುಖಪುಟ ವಿನ್ಯಾಸ: ಕೆ. ಎಮ್. ಶೇಷಗಿರಿ ಬೆಂಗಳೂರು
ಅಕ್ಷರ ವಿನ್ಯಾಸ: ಸ್ವಾತಿ ಭಾಗವತ್ ಉಡುಪಿ

| | | | |
|---|---|---|---|
| **ಬಿಡಿ ಪ್ರತಿ** | **: ರೂ. 8.00** | **ವಾರ್ಷಿಕಚಂದಾ :** | ರೂ. 90.00 |
| **ಸದಸ್ಯರು** | : ರೂ. 2,250.00 | **15 ವರ್ಷಕ್ಕೆ** : | ರೂ. 1,250.00 |

**ಪೋಷಕರು :** ರೂ. 3,000.00



**ಅಯಾಯ ಲೇಖನಗಳಿಗೆ ಲೇಖಕರೇ ಜವಾಬ್ದಾರರು**

**ವಿದ್ವತ್ ಪ್ರಪಂಚ**

# ಗೀತಾಮೃತ

-ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರು

ಭಗವಾನ್ ಶ್ರೀ ಕೃಷ್ಣನು **"ನಾಸತೋ ವಿದ್ಯತೇ ಭಾವಃ ನಾಭಾವೋ ವಿದ್ಯತೇ ಸತಃ"** ಎಂಬ ಶ್ಲೋಕವನ್ನು ಉಪದೇಶಮಾಡುವಾಗ ಎರಡು ಅರ್ಥವುಳ್ಳ ಶಬ್ದವನ್ನು ಪ್ರಯೋಗಮಾಡಿದ್ದಾನೆ. ಒಂದು ಅರ್ಥವನ್ನು ಇಲ್ಲಿಯವರೆಗೆ ವಿವರಿಸಿದ್ದಾಯಿತು. ಅರ್ಜುನನು ಯುದ್ಧದಿಂದ ಪಾಪವು ಪ್ರಾಪ್ತವಾಗುವುದು ಎಂದು ಶಂಕೆಯನ್ನು ಮಾಡಿದಾಗ ಈ ಶಂಕೆಯನ್ನು ಪರಿಹರಿಸಲೋಸುಗ ಇನ್ನೊಂದು ಅರ್ಥದಿಂದ ಈ ಶ್ಲೋಕವನ್ನು ಬಿಡಿಸುತ್ತಾನೆ. ಶಾಸ್ತ್ರನಿಷಿದ್ಧಕರ್ಮದಿಂದ ಅಂದರೆ ಅಸತ್‌ಕರ್ಮದಿಂದ ಹೇಗೆ ಸುಖವಿಲ್ಲವೋ ಅದೇ ರೀತಿ ಶಾಸ್ತ್ರವಿಹಿತಸತ್ಕರ್ಮಾನುಷ್ಠಾನದಿಂದ ಪಾಪವಾಗಲಿ-ದುಃಖವಾಗಲಿ ಪ್ರಾಪ್ತವಾಗಲಾರದು. ಪ್ರಕೃತದಲ್ಲಿ ದುಷ್ಟನಿಗ್ರಹರೂಪವಾದ ಯುದ್ಧವು ಕ್ಷತ್ರಿಯನಿಗೆ ಶಾಸ್ತ್ರವಿಹಿತ ಸತ್ಕರ್ಮವಾಗಿದೆ. ಸತ್ಕರ್ಮವಾದ ಕಾರಣ ಇದರಿಂದಾಗಿ ಪಾಪವು-ದುಃಖವು ಸಂಭವಿಸುವುದು ಎಂದು ಹೇಳುವುದು ಯುಕ್ತವಲ್ಲ. ಆದರೆ ಲೋಕದಲ್ಲಿ ಧಾರ್ಮಿಕರಾದವರು ದುಃಖವನ್ನು ಅನುಭವಿಸಿ ಅಧಾರ್ಮಿಕರು ಸುಖವನ್ನು ಅನುಭವಿಸುವುದು ಪ್ರಾಯಶಃ ಕಂಡಿದೆ. ಉದಾಹರಣೆಗೆ ಧರ್ಮಮೂರ್ತಿಯಾದ ಧರ್ಮರಾಜನೇ ಅರಣ್ಯವಾಸದ ದುಃಖವನ್ನು ಅನುಭವಿಸಿದನು. ಪರಮನೀಚನಾದ ಅಧಾರ್ಮಿಕ ದುರ್ಯೋಧನನು ಹಸ್ತಿನಾಪುರದ ಸಂಪತ್ತನ್ನು ಭೋಗಿಸಿದನು. ಇಂತಹ ಉದಾಹರಣೆಗಳು ಬಹಳಷ್ಟು ಇವೆ. ಆದ್ದರಿಂದ ಶಾಸ್ತ್ರವಿಹಿತ ಕರ್ಮದಿಂದ ದುಃಖಪ್ರಾಪ್ತಿಯಾಗಲಾರದು ಎಂಬ ಶಾಸ್ತ್ರವಚನ ಹೇಗೆ ಯುಕ್ತವಾದೀತು? ಒಂದು ದೃಷ್ಟಿಯಿಂದ ವಿಚಾರಮಾಡಿದರೆ ಕಾಯೇನವಾಚಾಮನಸಾ ತ್ರಿಕರಣ ಶುದ್ಧಿಯಿಂದ ಧರ್ಮನಿಷ್ಠರಾಗಿರುವವರು ಬಹಳ ದುರ್ಲಭರು. ಹೊರಗೆ ಧಾರ್ಮಿಕರಂತೆ ಕಾಣುತ್ತಿದ್ದರೂ, ಒಳಗೆ ಮನಸ್ಸುಶುದ್ಧಿಯಿಲ್ಲದಿರುವುದರಿಂದಲೇ ಅವರ ಧರ್ಮಾನುಷ್ಠಾನವು ಯೋಗ್ಯ ಫಲವನ್ನು ಕೊಡದೇ ಇರಬಹುದು. ಆದರೆ ಧರ್ಮರಾಜನಂತವರಿಗೆ ಇದು ಕೂಡುವುದಿಲ್ಲ. ಅಂತಹವರು ಕಷ್ಟವನ್ನು ಅನುಭವಿಸಲು ಕಾರಣ ಏನೆಂದರೆ ಪ್ರಾರಬ್ಧಕರ್ಮ. **"ಅವಶ್ಯಮನುಭೋಕ್ತವ್ಯಂ ಕೃತಂ ಕರ್ಮ ಶುಭಾಶುಭಂ"** ಎಂಬ ಮಾತಿಗನುಗುಣವಾಗಿ ಜನ್ಮಾಂತರದ ಪ್ರಾರಬ್ಧಕರ್ಮದ ಫಲವಾಗಿ ಸುಖವನ್ನೋ

ದುಃಖವನ್ನೋ ಅನುಭವಿಸಿಯೇ ತೀರಬೇಕು. ಇದು ಶಾಸ್ತ್ರದ ನಿರ್ಣಯ. ಇದಕ್ಕನುಗುಣವಾಗಿ ಧಾರ್ಮಿಕರು ಪ್ರಾರಬ್ಧಕರ್ಮಕ್ಕನುಗುಣವಾಗಿ ದುಃಖವನ್ನು ಭೋಗಿಸುವ ಯೋಗವು ಇರಬಹುದು.

ಸಂಸಾರದಲ್ಲಿ ವೈರಾಗ್ಯವುಂಟಾಗಿ ಅದರಿಂದ ನಿವೃತ್ತಿಯನ್ನು ಹೊಂದಿ ಮನಃಶುದ್ಧಿಯನ್ನು ಪಡೆದು ಬ್ರಹ್ಮನಿಷ್ಠರಾಗಬೇಕು ಎಂಬ ಉದ್ದೇಶದಿಂದ ಧಾರ್ಮಿಕರಿಗೆ ಪರಮಾತ್ಮನು ದುಃಖವನ್ನು ಕೊಡುತ್ತಾನೆ ಎಂದು ಇನ್ನೊಂದು ರೀತಿಯಿಂದ ಶಾಸ್ತ್ರಜ್ಞರು ತಿಳಿಸುತ್ತಾರೆ. ಸಂಸಾರದಲ್ಲಿ ಭಗವದ್ಭಕ್ತರಿಗೆ ವೈರಾಗ್ಯವನ್ನು ಉಂಟುಮಾಡುವುದು ಯುಕ್ತವಾದೀತೇ? ಎಂಬ ಜಿಜ್ಞಾಸೆ ಬಂದರೆ ಅದಕ್ಕೆ ಈ ರೀತಿಯಾಗಿ ಸಮಾಧಾನವನ್ನು ತಿಳಿಸುತ್ತಾರೆ. ಪರಮಾತ್ಮನು ಭಗವದ್ಭಕ್ತರಿಗೆ ದುಃಖವನ್ನು ಕೊಡುವುದು ತಾಯಿಯು ತನ್ನ ಪ್ರೀತಿಯ ಮಕ್ಕಳಿಗೆ ಕಹಿಯಾದ ಔಷಧವನ್ನು ಅವರ ಆರೋಗ್ಯಕ್ಕಾಗಿ ಕೊಡುವಂತೆ ಇಲ್ಲಿಯೂ ವೈರಾಗ್ಯವನ್ನು ಹೊಂದಿ ಬ್ರಹ್ಮನಿಷ್ಠರಾಗಬೇಕೆಂಬ ಉದ್ದೇಶದಿಂದಲೇ ಪ್ರೀತಿಯಿಂದಲೇ ಭಗವದ್ಭಕ್ತರಿಗೆ ವೈರಾಗ್ಯವನ್ನು ಕೊಡುತ್ತಾನೆ.

ಧರ್ಮಮೂರ್ತಿಯಾದ ಧರ್ಮಜನಿಗೆ ವನವಾಸದ ದುಃಖ ಬರಲು ಇನ್ನೊಂದು ಕಾರಣ ತಿಳಿಸುತ್ತಾನೆ. ತನ್ನ ತಮ್ಮಂದಿರಿಂದೊಡಗೂಡಿ ಭಗವಂತನಾದ ಶ್ರೀಕೃಷ್ಣನ ನೇತೃತ್ವದಲ್ಲಿ ನಡೆಸಿದ ರಾಜಸೂಯ ಯಾಗದಿಂದ ಮಿತಿಮೀರಿದ ಪುಣ್ಯವನ್ನು ಗಳಿಸಿದನು. ಆ ಪುಣ್ಯವನ್ನು ಭೀಮಸೇನಾದಿಗಳಿಗೆ ಯಥಾಯೋಗ್ಯವಾಗಿ ಹಂಚುವುದಕೋಸ್ಕರ ಶ್ರೀಕೃಷ್ಣನು ಧರ್ಮರಾಜನಿಂದ ದ್ಯೂತಕ್ರೀಡೆಯನ್ನು ಮಾಡಿಸಿ, ಆ ಕ್ರೀಡೆಯಲ್ಲಿ ತನ್ನ ತಮ್ಮಂದಿರನ್ನೇ ಪಣವಾಗಿಟ್ಟು ಅವರಿಗೆ ವನವಾಸಾದಿಗಳು ಆಗುವಂತೆ ಮಾಡಿದನು. ಅ ಧಾರ್ಮಿಕರು ಸುಖವನ್ನು ಅನುಭವಿಸುವ ಕಾರಣವನ್ನು ಈ ರೀತಿಯಾಗಿ ತಿಳಿಸುತ್ತಾರೆ. ಹಿಂದಿನ ಜನ್ಮದಲ್ಲಿ ಮಾಡಿದ ಸುಕೃತವು ಈ ಜನ್ಮದಲ್ಲಿ ಫಲಕೊಡಲು ಆರಂಭಿಸಿದರಿಂದ ಸುಖವನ್ನು ಅನುಭವಿಸುವರು. ಈ ಜನ್ಮದ ಫಲ ಮುಂದಿನ ಜನ್ಮಕ್ಕೆ ಉಂಟೇ ಉಂಟು. ಅಥವಾ ಅಧರ್ಮದಲ್ಲಿ ಅಭಿರುಚಿಯನ್ನು ಹೊಂದಲು ಮತ್ತು ಇನ್ನಷ್ಟು ಪಾಪಕೆಲಸವನ್ನು ಮಾಡಲು, ಆ ಮೂಲಕ ಯೋಗ್ಯತಾನುಸಾರ ಗತಿಹೊಂದಲಿಕ್ಕಾಗಿ ಪರಮಾತ್ಮನು ಸುಖವನ್ನು ನೀಡುತ್ತಾನೆ. ಸುಖವೈಭವದ ಮದದಿಂದ ಮೆರೆದು ಕೊನೆಗೆ ಅವರು ದುಃಖವನ್ನೇ ಅನುಭವಿಸುತ್ತಾರೆ. ಉದಾಹರಣೆಗೆ ಅಪಥ್ಯ ಮಾಡುವ ರೋಗಿಗೆ ತಿಂದ ಆಹಾರದಿಂದಾಗಿ ತಾತ್ಕಾಲಿಕ ಸುಖವುಂಟಾದರೂ ಕೊನೆಗೂ ಮರಣ ಪ್ರಾಪ್ತಿದುಃಖವುಂಟೇ ಉಂಟು. ಅದೇರೀತಿ ಅಧಾರ್ಮಿಕರು ಸುಖವನ್ನು

(26ನೇ ಪುಟದಲಿ.....)

(ಪ್ರವಚನ ಮಾಲಿಕೆ) ಭಾಗ-16

# ವಿದುರನೀತಿ

-ಶ್ರೀ ಶ್ರೀ ವಿಶ್ವಪ್ರಿಯತೀರ್ಥಶ್ರೀಪಾದರು, ಶ್ರೀಅದಮಾರುಮಠ, ಬರಹಃ ಕೃಷ್ಣಾ

ಧೃತರಾಷ್ಟ್ರ! ನಮ್ಮ ಮನೆಯಲ್ಲಿ ಐದು ರೀತಿಯ ಆರಾಧನೆಗಳು ನಡೆಯಬೇಕು.

**ದೇವಾನ್ ಪಿತೄನ್ ಮನುಷ್ಯಾನ್ ಭಿಕ್ಷೂನ್ ಅತಿಥಿಪಂಚಮಾನ್॥**

ಪ್ರತಿದಿನ ಮನೆಯಲ್ಲಿ ಪಂಚಯಜ್ಞ ಮಾಡುತ್ತೇವೆ. ವೈಶ್ವದೇವದಿಂದ ಅಗ್ನಿಯ ಅಂತರ್ಗತ ಭಗವಂತನ ಆರಾಧನೆಯೊಂದಿಗೆ ಆರಂಭಿಸುತ್ತಾ, ದೇವತೆಗಳಾರಾಧನೆ, ಪಿತೃಗಳಾರಾಧನೆ, ಋಷಿಗಳಾರಾಧನೆ, ಅತಿಥಿಗಳ ಆರಾಧನೆ ಹಾಗೂ ಭೂತಗಳ ಆರಾಧನೆ- ಅಂದರೆ ವೈಶ್ವದೇವ ಮಾಡಿದ ನಂತರದಲ್ಲಿ ಸ್ವಲ್ಪ ಅನ್ನವನ್ನು ನಾಯಿಗಳಿಗೆ, ಪಕ್ಷಿಗಳಿಗೆ ಹಾಕುವ ಮೂಲಕ ಭಗವಂತನ ಆರಾಧನೆ ಮಾಡಬೇಕು. ವಿದುರ ಹೇಳುವ ಪಂಚಯಜ್ಞದಲ್ಲಿ, ಸ್ವಲ್ಪ ಅನ್ನವನ್ನು ಮೂರು ಸಲ ತುಪ್ಪದಲ್ಲಿ ಬೆರೆಸಿ, **ಅಗ್ನಿ ಅಂತರ್ಗತ ಪರಶುರಾಮಃ ಪ್ರೀಯತಾಮ್** ಎಂದುಕೊಂಡು ಬೆಂಕಿಗೆ ಹಾಕುವುದರಿಂದ, ವೈಶ್ವದೇವದ ಮೂಲಕ ದೇವತಾರಾಧನೆ. ಜನ್ಮಕೊಟ್ಟಿರುವ ತಂದೆ-ತಾಯಿಗಳಿಗೆ ಶ್ರಾದ್ಧ ಹಾಕುವುದು ಪಿತೃಗಳಾರಾಧನೆ. ನಮಗೂ ದೇಹ ಕೊಟ್ಟಿರತಕ್ಕಂತಹ ಅಪ್ಪ ಅಮ್ಮನವರನ್ನು ಎಣಿಸಿಕೊಂಡು ಪಿತೃದೇವತೆಗಳ ಗುಂಪಿಗೆ ತೃಪ್ತಿ ಪಡಿಸಬೇಕು. ಪಿತೃದೇವತೆಗಳಿಗೆ ಅನ್ನ ಕೊಡುವ ಮೂಲಕ ಈ ಶರೀರಕ್ಕೂ, ನಮಗೆ ಜನ್ಮ ಕೊಟ್ಟಿರತಕ್ಕಂತಹ ಚೇತನದ ಋಣ ಪರಿಹರಿಸಿಕೊಳ್ಳುವುದು. ಇದು ಶ್ರಾದ್ಧದ ಫಲ. ಯಾವುದನ್ನು ಮಿತಿ ಮೀರಿದ ಶ್ರದ್ಧೆಯಿಂದ ಮಾಡಿ ಋಣ ಪರಿಹರಿಸಿಕೊಳ್ಳುತ್ತೇವೋ ಅದಕ್ಕೆ ಶ್ರಾದ್ಧ ಎಂದು ಹೆಸರು ಬಂತು. ಈ ಋಣ ಪರಿಹಾರ ಎಂಬ ದೊಡ್ಡ ಜವಾಬ್ದಾರಿಯನ್ನು ಸಮಾಜದಲ್ಲಿರುವ ಪ್ರತಿಯೊಬ್ಬ ಮಾನವನ ಮೇಲೂ ಭಗವಂತ ಇಟ್ಟಿದ್ದಾನೆ. ಒಬ್ಬ ಸ್ತ್ರೀ ತನ್ನ ಪತಿಯನ್ನು ಕೂಡಿಕೊಂಡು ಈ ಋಣ ಪರಿಹರಿಸಿದರೆ, ಪತಿಯಿಲ್ಲದ, ಮಕ್ಕಳಿಲ್ಲದ ಸ್ತ್ರೀ ಜಗನ್ನಾಥದಾಸರ ಹರಿಕಥಾಮೃತಸಾರದ 'ಪಿತೃ ಸಂಧಿ'ಯ ಪಾರಾಯಣದಿಂದ ಋಣ ಪರಿಹರಿಸಿಕೊಳ್ಳಲು ಸಾಧ್ಯ. ಧೃತರಾಷ್ಟ್ರ! ಪ್ರಜೆಗಳಲ್ಲಿ ದೇವರನ್ನು ಕಂಡು, ಅವರಿಗೆ ಹಿಂಸೆ ಕೊಡದೆ ಅವರ ಪಾಲನೆಯನ್ನು ಯೋಗ್ಯ ರೀತಿಯಲ್ಲಿ ಮಾಡುವುದೇ ಮನುಷ್ಯರ ಆರಾಧನೆ. ಇನ್ನು ತಿಥಿ ಇಲ್ಲದೆ ಅಕಸ್ಮಾತ್ತಾಗಿ ಮನೆಗೆ ಬರುವ ಜನರಲ್ಲಿ ಭಗವಂತನನ್ನು ಕಂಡು ಆದರ-ಆತಿಥ್ಯ ಮಾಡುವುದರಿಂದ ಅತಿಥಿ ಆರಾಧನೆಯನ್ನು ಮಾಡಿದಂತಾಗುವುದು. ಕೊನೆಯಲ್ಲಿ ಭಿಕ್ಷುಗಳಾರಾಧನೆ. ಮನೆ, ಮಠ ಇಲ್ಲದ ಲೋಕದಲ್ಲಿ ಎಲ್ಲವನ್ನು ಪರಿತ್ಯಾಗ ಮಾಡಿಕೊಂಡಿರತಕ್ಕಂತಹ ಸನ್ಯಾಸಿಗಳನ್ನು ಮನೆಗೆ ಕರೆದು ಆದರಿಸು ಎಂದು ವಿದುರನು

ಬುದ್ಧಿ ಮಾತುಗಳನ್ನು ಹೇಳುತ್ತಾನೆ. ಆದರೆ ಎಲ್ಲಾ ಕಡೆಯಲ್ಲಿ ಆರಾಧನೆಯಲ್ಲಿ, ಭಗವದಾರಾಧನೆ ಎಂಬ ಅನುಸಂಧಾನ ಇರಲೇಬೇಕು. **'ಆಕಾಶಾತ್ ಪತಿತಂ ತೋಯಂ ಯಥಾ ಗಚ್ಛತಿ ಸಾಗರಂ'** ಅದೇ ರೀತಿ ನಾವು ಮಾಡಿದ ಆದರ ಒಬ್ಬನೇ ಭಗವಂತನಿಗೆ ಹೋಗಿ ಸೇರಬೇಕೆಂಬ ಸಂಕಲ್ಪ ನಮ್ಮದಾಗಬೇಕು. ಯಾರು ಭೂತಗಳನ್ನು ಪ್ರೇತಗಳನ್ನೇ ಉಪಾಸನೆ ಮಾಡುತ್ತಾರೋ ಅವರು ಕೂಡ ಒಂದು ರೀತಿಯಲ್ಲಿ ನನ್ನನ್ನೇ ಆರಾಧನೆ ಮಾಡುವುದು ಎಂದು ಕೃಷ್ಣ ಗೀತೆಯಲ್ಲಿ ಹೇಳಿದ್ದಾನೆ. ಇದನ್ನೇ ಆನಂದತೀರ್ಥರು ನಮಗೆ ಕೊಟ್ಟರು. **'ಏಕ ದೇವ ವಾದ'**. ದೇವ ಬೇರೆ, ದೇವತೆಗಳು ಬೇರೆ. ಯಾರಿಗಿಂತ ಮೇಲೆ ಇನ್ನೊಬ್ಬನಿಲ್ಲವೋ ಅವನು ದೇವ. ಯಾರ ಕೈ ಕೆಳಗೆ ಎಲ್ಲರೂ ಬರುತ್ತಾರೋ ಅವರು ದೇವತೆಗಳು. ಯಾವ ದೇವತೆಗೆ ಕೈ ಮುಗಿದರೂ ಅಂತರ್ಯಾಮಿ ಒಬ್ಬ ಭಗವಂತನ ಚಿಂತನೆ ಮಾಡಿಕೊಂಡು ನಮಸ್ಕಾರ ಮಾಡಬೇಕು. ಆಗಲೇ ನಮ್ಮ ಆರಾಧನೆಗೆ ಸರಿಯಾದ ಫಲ ಬರುತ್ತದೆ. **'ಸರ್ವದೇವ ನಮಸ್ಕಾರ ಕೇಶವಂ ಪ್ರತಿಗಚ್ಛತಿ'** ಎಂಬ ಚಿಂತನೆಯಲ್ಲಿ ನಮ್ಮ ಆರಾಧನೆ ನಡೆಯಲಿ.

ಆರು ರೀತಿಯ ಜನರನ್ನು ದೂರವಿಡಲು ವಿದುರನು ಹೇಳುತ್ತಾನೆ.

**ಅಪ್ರವಕ್ತಾರಂ ಆಚಾರ್ಯಂ ಅನಧೀಯಾನಂಚ ಋತ್ವಿಜಂ**
**ಅರಕ್ಷಿತಾರಂಚ ರಾಜಾನಂ ಭಾರ್ಯಾಂಚ ಅಪ್ರಿಯವಾದಿನೀಂ**
**ಗ್ರಾಮಕಾಮಂಚ ಗೋಪಾಲಂ ವನಕಾಮಂಚ ನಾಪಿತಂ**

ಆಚಾರ್ಯರೆಂದರೆ ಸ್ವಯಂ ಆಚರತೆಯಸ್ತು. ಸ್ವಯಂ ತಾನು ತಿಳುವಳಿಕೆ ಮಾತ್ರ ಉಳ್ಳವನಾದರೆ ಅವನನ್ನು 'ಪಂಡಿತ' ಎಂದು ಕರೆದರು. ಜೀವನದಲ್ಲಿ ತಾನು ತಿಳುವಳಿಕೆ ಉಳ್ಳವನಾಗಿ ಅದನ್ನು ಆಚರಿಸಿಕೊಂಡು, ತನ್ನ ಪಾಂಡಿತ್ಯವನ್ನು ಇನ್ನೊಬ್ಬರಿಗೆ ತಿಳಿಸುತ್ತಾ ಅವರು ಕೂಡ ಆಚರಿಸುವಂತೆ ಯಾರು ಮಾಡುತ್ತಾನೋ ಅವನನ್ನು ಆಚಾರ್ಯನೆಂದು ಕರೆದರು. ಇಂತಹ ಯಾವ ಆಚಾರ್ಯನು ಸಮಾಜಕ್ಕೆ ಪಾಠ ಹೇಳುವುದಿಲ್ಲವೋ ಅಂಥವನನ್ನು ರಾಜ್ಯದಲ್ಲಿ ಇಟ್ಟುಕೊಳ್ಳಬೇಡ ಎಂದು ವಿದುರನು ತಿಳಿ ಹೇಳುತ್ತಾನೆ. ಇನ್ನು ಪುರೋಹಿತರ ವಿಷಯದಲ್ಲಿ ಎಚ್ಚರಿಸುತ್ತಾನೆ. ನಮ್ಮ ಊರಿಗೆ, ನಮ್ಮ ಶರೀರಕ್ಕೆ ಬರುವ ಆಪತ್ತುಗಳ ಬಗ್ಗೆ ಮೊದಲೇ ನಮಗೆ ಸೂಚಿಸಿ, ಅದಕ್ಕೆ ಬೇಕಾಗಿರುವ ಪರಿಹಾರ ಮಾಡಿ ನಮಗೆ ಹಿತ ಮಾಡುವವನೇ ಪುರೋಹಿತನು. ಯಾವನಿಗೆ ಯಜ್ಞಯಾಗಾದಿಗಳಲ್ಲಿ ಆಹುತಿ ಯಾವುದು, ಯಾಕೆ, ಯಾರಿಗೆ, ಕೊಡುವುದೆಂದು ಗೊತ್ತಿಲ್ಲವೋ ಅಂತಹ ಅಸಂಸ್ಕೃತ ಪುರೋಹಿತನನ್ನು ಬಿಟ್ಟು ಬಿಡು ಎಂದು ವಿದುರ ಧೃತರಾಷ್ಟ್ರನಿಗೆ ತಿಳಿಸುತ್ತಾನೆ.

**(ಸಶೇಷ)**

# ತೈತ್ತಿರೀಯೋಪನಿಷತ್

ಬರಹ: ಪಿ. ವೆಂಕಟರಮಣ ಆಚಾರ್ಯ, ಉಡುಪಿ ಪ್ರವಚನ: ಬನ್ನಂಜೆ ಗೋವಿಂದಾಚಾರ್ಯ

ನಾನು ಸಂಸಾರದ ವೃಕ್ಷವನ್ನು ಕತ್ತರಿಸಿ ನಿಂತಿದ್ದೇನೆ. ನನ್ನ ಕೀರ್ತಿ ಪರ್ವತದ ರೂಪದಲ್ಲಿ ಬೆಳೆದು ನಿಂತಿದೆ ಎಂದು ಗುರು ಹೇಳುತ್ತಾನೆ. ನನ್ನ ಅಧ್ಯಯನ, ತಪಸ್ಸನ್ನು ಜನ ಗುರುತಿಸಿ ನನಗೆ ಅದರಿಂದ ಕೀರ್ತಿ ದೊರೆಯಲಿ, ನಾನು ಸಂಸಾರವನ್ನು ಗೆದ್ದಿದ್ದೇನೆ ಎಂಬ ಕೀರ್ತಿ ಬರಲಿ, ನನಗೆ ಜ್ಞಾನ ಬರಲಿ, ನನ್ನ ಜ್ಞಾನ ನನ್ನ ಶಿಷ್ಯರ ಮೂಲಕ ನಿರಂತರವಾಗಿ ಮುಂದೆ ಸಾಗಲಿ, ಜ್ಞಾನ ಪರಂಪರೆಯನ್ನು ಉಳಿಸಿದ ಕೀರ್ತಿ ಬರಲಿ.

ಜ್ಞಾನ ಬೇಕಾದಷ್ಟು ಇದೆ, ಆದರೆ ಅದನ್ನು ಕೇಳುವ ಜನ ಇಲ್ಲದಿದ್ದರೆ ಏನು ಪ್ರಯೋಜನ? ಆದ್ದರಿಂದ ಕೇಳುವ ಜನ ಇರಲಿ. ಅವರಿಂದ ಅವರ ಜೊತೆಗೆ ನನಗೆ ಯಶಸ್ಸು ಸಿಗಲಿ. ಇದಕ್ಕೆ ಇಷ್ಟೇ ಅರ್ಥ ಅಲ್ಲ. ಆಧ್ಯಾತ್ಮಿಕವಾದ ಒಂದು ಅರ್ಥ ಇದೆ. 'ಯ' ಎಂಬುದು ಜ್ಞಾನವಾಚಕ ಶಬ್ದ. 'ಶ' ಎಂಬುದು ಆನಂದವಾಚಕ ಶಬ್ದ. 'ಯಶ' ಎಂಬುದು ಜ್ಞಾನಾನಂದದ ಮುಖವನ್ನು ಹೇಳುವ ಶಬ್ದ. ಇಲ್ಲಿ ಅನ್ನಮಯ, ಪ್ರಾಣಮಯ ಹಾಗೂ ಮನೋಮಯ ಕೋಶಗಳನ್ನು ಹೇಳುವುದಿಲ್ಲ. ಕೇವಲ ಜ್ಞಾನ ಹಾಗೂ ಆನಂದಮಯಕೋಶಗಳನ್ನು ಮಾತ್ರ ಹೇಳುತ್ತಾರೆ. ಯಾಕೆಂದರೆ ಅನ್ನಮಯ, ಪ್ರಾಣಮಯ, ಮನೋಮಯ ಕೋಶಗಳು ಯಾವಾಗಲು ಜಾಗ್ರತವಾಗಿರುತ್ತವೆ. ಹಸಿವೆಯಾದರೆ ಅನ್ನಮಯಕೋಶ ಎಬ್ಬಿಸುತ್ತದೆ. ಮನಸ್ಸು ಯಾವಾಗಲು ಯೋಚಿಸುತ್ತಾ ಇರುತ್ತದೆ. ಆದರೆ ಜ್ಞಾನಾನಂದ ಕೋಶಗಳು ಮುಚ್ಚಿರುತ್ತವೆ. ಮೇಲಿನ ಮೂರೂ ಕೋಶಗಳಿಗೆ ಪರಮಾತ್ಮನ ಸಹಾಯ ಬೇಡ,. ವೇದಾಧ್ಯಯನ ಬೇಡ. ಆದರೆ ಜ್ಞಾನಾನಂದದ ಕೋಶಗಳು ತೆರೆಯಬೇಕಾದರೆ ಭಗವಂತನ ಸಹಾಯಬೇಕು. ವೇದಾಧ್ಯಯನ ಬೇಕು. ಜ್ಞಾನಾನಂದ ಕೋಶಗಳು ತೆರೆಯದೇ ಇದ್ದರೆ ನಮಗೂ ಪ್ರಾಣಿಗಳ ಹಾಗೆ ಮೂರೇ ಕೋಶಗಳು ತೆರೆದಿದ್ದು ವ್ಯತ್ಯಾಸವೇ ಇಲ್ಲವೆಂದಾಗುತ್ತದೆ. ವಿಜ್ಞಾನ ಹಾಗೂ ಆನಂದಮಯರೂಪನಾದ ಭಗವಂತ ನಮಗೆ ಯಶಸ್ಸನ್ನು ಕೊಡಲಿ. ನಮಗೆ ಜೊತೆಯಾಗಿ ಬ್ರಹ್ಮವರ್ಚಸ್ಸನ್ನು ಕೊಡಲಿ. ಬ್ರಹ್ಮವರ್ಚಸ್ಸು ಎಂದರೆ ಕಳೆ. ವಿದ್ಯೆಯ ಕಳೆ ಮುಖದಲ್ಲಿ ಬರಲಿ. ಕೆಲವರ ಮುಖವನ್ನು ನೋಡಿಯೇ

ಅವನು ಬಹಳ ಬುದ್ಧಿವಂತ ಎಂದು ತರ್ಕಿಸುವುದುಂಟು. ಜ್ಞಾನ ಇದ್ದರೆ ತನ್ನಷ್ಟಕ್ಕೆ ತಾನೇ ಮುಖದಲ್ಲಿ ಕಳೆ ಬರುತ್ತದೆ. ಇದು ಕೇವಲ ಹೊರಗಿನ ಕಳೆ. ಕೇವಲ ಹೊರಗಿನ ಕಳೆಯೇ ಬ್ರಹ್ಮವರ್ಚಸ್ಸು ಅಲ್ಲ. ಬರೇ ವೇದ ಓದಿದ್ದರಿಂದಲೇ ಬ್ರಹ್ಮವರ್ಚಸ್ಸು ಬರುವುದಿಲ್ಲ. ತಪಸ್ಸು ಹಾಗೂ ಅಧ್ಯಯನದಿಂದ ಬ್ರಹ್ಮವರ್ಚಸ್ಸು ಬರುತ್ತದೆ. ಇವತ್ತು ವೇದ ಓದಿ ನಂತರ ಅದನ್ನು ಬಿಟ್ಟು ಲೌಕಿಕದ ಕಡೆಗೆ ಹೋದರೆ ಬ್ರಹ್ಮವರ್ಚಸ್ಸು ಬರುವುದಿಲ್ಲ. ವೇದ ಓದಿದ ನಂತರ ಅದನ್ನು ಚಿಂತನೆ ಹಾಗೂ ಅಧ್ಯಯನ ಮೂಲಕ ಉಳಿಸಿದಾಗ ಬ್ರಹ್ಮವರ್ಚಸ್ಸು ನಿರ್ಮಾಣ ಆಗುತ್ತದೆ. ಅಧ್ಯಯನ ಹಾಗೂ ಅನುಷ್ಠಾನ ಇದ್ದಾಗ ಬ್ರಹ್ಮವರ್ಚಸ್ಸು ಬರುತ್ತದೆ. ಜ್ಞಾನ ಹಾಗೂ ಕ್ರಿಯೆ ಎರಡೂ ಮೇಳವಿಸಿದಾಗ ಬ್ರಹ್ಮವರ್ಚಸ್ಸು (ಕಾಂತಿ ಹಾಗೂ energy) ಬರುತ್ತದೆ. ಇಂಥ ಕಳೆ ಇದ್ದವ ನಮ್ಮೆದುರು ಬಂದಾಗ ನಮಗೆ ಗೊತ್ತಾಗದ ಹಾಗೆ ತಲೆ ಬಗ್ಗಿಸಿ ಬಿಡುತ್ತೇವೆ. ನಮ್ಮ ಬ್ರಹ್ಮವರ್ಚಸ್ಸು ಇನ್ನೊಬ್ಬರಿಗೆ ಮಾರ್ಗದರ್ಶನ ಆಗಲಿ. ಸಮಾಜಕ್ಕೆ ನಮ್ಮ ಬ್ರಹ್ಮವರ್ಚಸ್ಸು ಗೊತ್ತಾಗಲಿ. ಅದರಿಂದ ಸಮಾಜ ಒಳ್ಳೆಯದಾಗಲಿ. ಅದರ ಫಲ ಎಲ್ಲರಿಗೂ ಸಿಗಲಿ. ಬ್ರಹ್ಮವರ್ಚಸ್ಸು ನಿಜವಾದ ಬಲ.

ವಿಶ್ವಾಮಿತ್ರ ಋಷಿ ಕ್ಷತ್ರಿಯರ ಬಲಕ್ಕೆ ಧಿಕ್ಕಾರ ಇರಲಿ. ನಿಜವಾದ ಬಲ ಎಂದರೆ ಆತ್ಮ ಬಲ. (ಬ್ರಹ್ಮವರ್ಚಸ್ಸು-ಆತ್ಮಶಕ್ತಿ) ಆತ್ಮಶಕ್ತಿ ದೇಹಶಕ್ತಿಗಿಂತ ದೊಡ್ಡದು. ದೇಹ ಶಕ್ತಿ ಬೆಳೆಸುವುದು ದೊಡ್ಡ ವಿಷಯವೇ ಅಲ್ಲ. ಒಂದು ದಿವಸ ಈ ದೇಹ ಶಕ್ತಿ ಹೊರಟು ಹೋಗುತ್ತದೆ. ಎರಡನೇ ಜನ್ಮದಲ್ಲಿ ಪುನಃ ಅದನ್ನು ಪ್ರಾರಂಭಿಸಿ ಪಡೆಯಬೇಕು. ಆದರೆ ಒಮ್ಮೆ ಬ್ರಹ್ಮವರ್ಚಸ್ಸನ್ನು ಪಡೆದರೆ ಮುಂದಿನ ಜನ್ಮದಲ್ಲೂ ಅದು ಮುಂದುವರಿಯುತ್ತಾ ಹೋಗುತ್ತದೆ. ಮುಂದಿನ ಜನ್ಮದಲ್ಲಿ ಅದಕ್ಕೆ ಬೆಂಬಲಕೊಟ್ಟರೆ ವೃದ್ಧಿ ಹೊಂದುತ್ತದೆ. ಈ ಜನ್ಮದಲ್ಲಿ ಪಡೆದ ಬ್ರಹ್ಮವರ್ಚಸ್ಸು ಬರುವ ಜನ್ಮಕ್ಕೆ ಬರುತ್ತದೆ. ದೇಹಶಕ್ತಿ ಹೋದ ಹಾಗೆ ಬ್ರಹ್ಮವರ್ಚಸ್ಸು ಹೋಗುವುದಿಲ್ಲ. ಇದರಿಂದ ಭಗವಂತನ ಸಾಕ್ಷಾತ್ಕಾರ ಆಗಲಿ. ಅಲ್ಲಿಂದ ಸ್ವರೂಪಾನಂದದ ಸಾಕ್ಷಾತ್ಕಾರ ಆಗಲಿ. ಇಷ್ಟೆಲ್ಲ ಆದನಂತರ ಇನ್ನು ವೇದಾಧ್ಯಯನ ಪ್ರಾರಂಭವಾಗುತ್ತದೆ. ಇಷ್ಟರವರೆಗೆ ವೇದಾಧ್ಯಯನ ಮಾಡಲಿಕ್ಕೆ ಸ್ವರ, ವರ್ಣ, ಮಾತ್ರೆಗಳನ್ನು ಹೇಗೆ ಬಲದಿಂದ ಉಚ್ಚರಿಸಬೇಕು ಎಂದು ತಿಳಿದೆವು. ನಂತರ ಕ್ರಮವಾಗಿ ವೇದಾಧ್ಯಯನ ಪ್ರಾರಂಭಮಾಡಬೇಕು. ಸಾಕ್ಷಾತ್ಕಾರಕ್ಕೆ ಇದು ಬಾಗಿಲಾಗಲಿ. ನಮ್ಮಲ್ಲೇ ಇದು ಕೊನೆಯಾಗದೆ ಮುಂದಕ್ಕೆ ನಿರಂತರವಾಗಿ ಸಾಗಲಿ.

(ಸಶೇಷ)

# ಶ್ರೀಹರಿಭಕ್ತಿಸಾರ

-ವಿ॥ ಹಯವದನ ಪುರಾಣಿಕ, ತಿರುಪತಿ

**ಕೋಪವೆಂಬುದು ತನುವಿನಲಿ ನೆರೆ**
**ಪಾಪ ಪಾತಕದಿಂದ ನರಕದ**
**ಕೂಪದಲಿ ಮುಳುಗುವುದು ತಪ್ಪದು ಶಾಸ್ತ್ರ ಸಿದ್ಧವಲೇ**
**ರಾಪು ಮಾಡದೆ ಬಿಡನು ಯಮನು ನಿ**
**ರಾಪರಾಧಿಯ ನೋಡಿ ಕೀರ್ತಿ ಕ**
**ಲಾಪವನು ನೀ ಕಾಯ್ದು ರಕ್ಷಿಸು ನಮ್ಮನನವರತ ॥ ೬೮ ॥**

ಶರೀರದಲ್ಲಿ ತುಂಬಿದ ಕೋಪವೆಂಬುದು ಮಹಾಪಾಪ. ಆ ಪಾತಕದಿಂದ ನರಕಕೂಪದಲ್ಲಿ ಮುಳುಗುವುದು ತಪ್ಪದು. ಇದು ಶಾಸ್ತ್ರಸಿದ್ಧವಲ್ಲವೆ? ಅದರಿಂದ ಯಮನು ಗರ್ವಮಾಡದೆ ಬಿಡನು. ನಿರಪರಾಧಿಯಾದ ನನ್ನನ್ನು ನೋಡಿ, ನಿನ್ನ ಕೀರ್ತಿಕಲಾಪವನ್ನು ನೀನು ಕಾಯ್ದುಕೊಂಡು, ನಮ್ಮನ್ನು ಸದಾ ಕಾಪಾಡು.

## ಕೋಪವೆಂಬುದು ತನುವಿನಲಿ ನೆರೆಪಾಪ

ಮಾನವನ ತನುವಿನಲ್ಲಿ ಅಂದರೆ ಶರೀರದಲ್ಲಿ ಕೋಪ ತುಂಬಿಕೊಳ್ಳುತ್ತದೆ. ಏಕೆಂದರೆ ಅದರಲ್ಲಿ ನವದ್ವಾರಗಳಿವೆ. ಎರಡು ಕಣ್ಣುಗಳು ಎರಡು ಕಿವಿಗಳು, ಎರಡು ಮೂಗಿನ ಹೊಳ್ಳೆಗಳು ಬಾಯಿ ಮತ್ತು ಮಲಮೂತ್ರದ್ವಾರಗಳು ಎಂದು. ಇವೇ ವಿಷಯಪದಾರ್ಥಗಳು ಶರೀರದೊಳಕ್ಕೆ ಹೋಗಿ ಬರುವ ಒಂಬತ್ತು ಬಾಗಿಲುಗಳು. ಇವುಗಳ ಮೂಲಕವೆ ಮಾನವ ವಿಷಯಭೋಗ ಮಾಡುತ್ತಾನೆ. ಅದಕ್ಕೆ ಬೇರೆಯವರಿಂದ ಅಡ್ಡಿ ಬಂದರೆ ಅಥವಾ ಬೇರೆಯವರು ತನಗಿಂತ ಹೆಚ್ಚಾಗಿ ವಿಷಯಭೋಗ ಮಾಡುವುದು ಕಂಡು ಬಂದರೆ ಅಸಹನೆಯಿಂದ ಕೋಪದ ಬೆಂಕಿ ಹೊಗೆಯಾಡುತ್ತದೆ. ನವದ್ವಾರಗಳೂ ತೆರೆದುಕೊಂಡು ಆ ಬೆಂಕಿಯ ಕಿಡಿಯನ್ನೂ ಜ್ವಾಲೆಯನ್ನೂ ಹೊರಕ್ಕೆ ಚೆಲ್ಲುತ್ತವೆ. ಸಿಕ್ಕವರನ್ನೆಲ್ಲ ಸುಟ್ಟು ಬಿಡುವಂತೆ ತನ್ನ ಕೋಪ ಉರಿದು ಮತ್ತೆ ತನ್ನನ್ನೇ ಸುಡುತ್ತದೆ. ಸತ್ತ ಮೇಲೆಯೂ ತನ್ನನ್ನು ನರಕ ಕೂಪದಲ್ಲಿ

ಮುಳುಗಿಸಿ ಬೇಯಿಸುತ್ತದೆ. ತನುವಿನಲ್ಲಿ ತುಂಬುವ ಈ ಕೋಪ ಮಹಾಪಾಪಕ್ಕೆ ಮೂಲ.

**ಪಾತಕದಿಂದ ನರಕಕೂಪದಲಿ ಮುಳುಗುವುದು ತಪ್ಪದು.**

ಮನೆಯಲ್ಲಿ ಅಡಿಗೆ ಮಾಡಿ ಮೃಷ್ಟಾನ್ನ ಸಿದ್ಧಪಡಿಸಿ ಸಂಭ್ರಮದಿಂದ ಉಣಲು ಹೊರಟಾಗ ಅನಿರೀಕ್ಷಿತವಾಗಿ ಅತಿಥಿಗಳು ಬಂದರೆಂದರೆ ನಿರಾಸೆಯಾಗುತ್ತದೆ. ಕೋಪ ಬರುತ್ತದೆ. ಅಸಹನೆಯಿಂದ ಆತ ಅವರನ್ನು ದುರುಗುಟ್ಟಿ ನೋಟದಿಂದಲೆ ಸುಟ್ಟು ಬಿಡುವಂತೆ ಕಾಣುತ್ತಾನೆ. ಅಂಥವನಿಗೆ ಮುಂದೆ ನರಕಕೂಪದಲ್ಲಿ ಶಿಕ್ಷೆ ಕಾದಿರುತ್ತದೆ. ಅಲ್ಲಿ ಅವನ ಕಣ್ಣುಗಳನ್ನು ಹದ್ದುಗಳು ಕುಕ್ಕಿ ಕುಕ್ಕಿ ತಿನ್ನುತ್ತವೆ.

**ಶಾಸ್ತ್ರಸಿದ್ಧವಲೆ**

ಕೋಪದಿಂದ ಪಾಪ, ಪಾಪದಿಂದ ನರಕ ಇವೆರಡೂ ಶಾಸ್ತ್ರಸಿದ್ಧ. ಭಗವದ್ಗೀತೆ ಹೇಳುತ್ತದೆ.

**ಕ್ರೋಧಾದ್ ಭವತಿ ಸಂಮೋಹಃ ಸಂಮೋಹಾತ್ ಸ್ಮೃತಿವಿಭ್ರಮಃ ।**
**ಸ್ಮೃತಿಭ್ರಂಶಾದ್ ಬುದ್ಧಿನಾಶೋ ಬುದ್ಧಿನಾಶಾತ್ ಪ್ರಣಶ್ಯತಿ ॥**

'ಕೋಪದಿಂದ ಅಕಾರ್ಯದಲ್ಲಿ ಒಲವು. ಅದರಿಂದ ಶಾಸ್ತ್ರದ ವಿಧಿನಿಷೇಧಗಳ ಮರೆವು. ತಾನು ಮಾಡುವುದರಲ್ಲೇನೂ ತಪ್ಪಿಲ್ಲ ಎಂದುಕೊಂಡು ಬುದ್ಧಿ ಹೀನನಾಗಿ ಅಕಾರ್ಯ ಮಾಡುತ್ತಾನೆ, ನರಕ ಭಾಗಿಯಾಗುತ್ತಾನೆ' ಎಂದು. ಅತಿಥಿಗಳನ್ನು ದುರುಗುಟ್ಟಿ ನೋಡುವವನಿಗೇ 'ಪರ್ಯಾವರ್ತನ' ಎಂಬ ನರಕ ಭಾಗವತ ಪಂಚಮಸ್ಕಂಧದಲ್ಲಿ ಉಕ್ತವಾಗಿದೆ. ಇನ್ನು

**'ಕ್ರುದ್ಧೋ ಹನ್ಯಾದ್ ಗುರೂನಪಿ'**

ಎನ್ನುವಂತೆ ಗುರುಹಿರಿಯರನ್ನು ಕೊಲ್ಲುವುದಕ್ಕೂ ಹೇಸದಿರುವ ಮುಂಗೋಪಿಗೆ ಎಂಥ ನರಕವಿರಬಹುದು? ಅದರಿಂದ ಶಾಸ್ತ್ರಸಿದ್ಧವಾದ ಈ ವಿಷಯದಲ್ಲಿ ಸಂದೇಹಕ್ಕೆ ಅವಕಾಶವಿಲ್ಲ.

**ರಾಪು ಮಡದೆ ಬಿಡನು ಯಮನು**

ಕೋಪದಿಂದ ಮಾನವ ಹೆಚ್ಚು ಹೆಚ್ಚು ಪಾಪ ಮಾಡಿದಂತೆಲ್ಲ ಯಮನಿಗೆ ಸೊಕ್ಕು

ಬೆಳೆಯುತ್ತದೆ. ಅವನು ರಾಪು ಮಾಡದೆ ಬಿಡನು, ಗರ್ವ ಮಾಡದೆ ಇರನು. ಗರ್ವದಿಂದ ಹೆಚ್ಚು ಹೆಚ್ಚು ಶಿಕ್ಷೆಗಳನ್ನೇ ನೀಡುತ್ತಾನೆ.

## ನಿರಾಪರಾಧಿಯ ನೋಡಿ, ಕೀರ್ತಿಕಲಾಪವನು ಕಾಯ್ದು

'ನಿರಪರಾಧಿ' ಶಬ್ದ ಹಾಡಿನಲ್ಲಿ 'ನಿರಾಪರಾಧಿ' ಎಂದಾಗಿದೆ. ಅದರಲ್ಲಿ ತಪ್ಪಿಲ್ಲ. ಅಥವಾ 'ಆ ಅಪರಾಧ' ದೊಡ್ಡ ಅಪರಾಧ. ದೊಡ್ಡ ಅಪರಾಧವೇನೂ ಮಾಡದಿರುವವನು ನಿರಾಪರಾಧಿ. ಅವನನ್ನು ಕ್ಷಮಿಸಬಹುದು ಎಂದು ಅಭಿಪ್ರಾಯ.

ಶ್ರೀಹರಿ, ನಾನು ನಿರಪರಾಧಿ, ನಿರಪರಾಧಿಯನ್ನು ನೀನು ಕಣ್ತೆರೆದು ನೋಡಬೇಕು. ಕರುಣೆಯ ನೋಟವನ್ನು ಹರಿಸಬೇಕು. ಕೋಪ ಮಾಡಿದಾಕ್ಷಣ ಅಪರಾಧಿ ಎಂದು ಶಿಕ್ಷೆ ನೀಡುವುದು ಅನ್ಯಾಯ. ಹಸಿವು ಬಾಯಾರಿಕೆಗಳಂತೆ ಕೋಪವೂ ಮಾನವನಿಗೆ ಸಹಜ. ಅದನ್ನು ತಡೆದುಕೊಳ್ಳುವವನು ಮಹಾತ್ಮ. ನಾನೂ ಕೋಪ ಮಾಡಿರಬಹುದು. ಆದರೆ ಕೋಪ ಮಾಡಿದವನು ಬಳಿಕ ಪಶ್ಚಾತ್ತಾಪದಿಂದ ನಿನ್ನ ನಾಮವನ್ನು ನೆನೆದರೆ ಪಾಪ ತೊಡೆದು ಹೋಗುತ್ತದೆ. ಅದಕ್ಕೆ ನೀನು ಕರುಣೆಯಿಂದ ನೋಡಿ, ನಾಮಸ್ಮರಣೆ ನೀಡಿ, ನನ್ನನ್ನು ಅಪರಾಧದಿಂದ ಮುಕ್ತನನ್ನಾಗಿಸಬೇಕು.

ನಿನ್ನ ಕೀರ್ತಿಕಲಾಪಗಳು ಅಪಾರವಾಗಿವೆ. ಕರುಣಾ ಸಾಗರ, ಕ್ಷಮಾಸಮುದ್ರ, ಭಕ್ತಾಪರಾಧಸಹಿಷ್ಣು ದೀನವತ್ಸಲ ಎಂದು ಮುಂತಾಗಿ ಲೆಕ್ಕವಿಲ್ಲದಷ್ಟು ಬಿರುದುಗಳು ನಿನಗೆ ಇವೆ. ನನಗೂ ದೀನ, ದೂನ, ಅನಾಥ, ಹರಿಭಕ್ತ, ಹರಿದಾಸ ಎಂದೆಲ್ಲ ಕೀರ್ತಿಕಲಾಪ ಇಲ್ಲದಿಲ್ಲ. ಅವೆಲ್ಲವನ್ನೂ ನೀನೇ ಕಾಪಾಡಬೇಕು. ನನಗೆ ಸದ್ಬುದ್ಧಿ ನೀಡಬೇಕು. 'ನಾನು ನನ್ನ ಮನೆ ನನ್ನ ಹೆಂಡಿರು ಮಕ್ಕಳು ನನ್ನ ಹಣಕಾಸು' ಎಂದು ಮುಂತಾದ ಸಂಕುಚಿತ ಮನೋಭಾವವನ್ನು ತೊಲಗಿಸಿ, ವಿಷ್ಣುಭಕ್ತರು ಹರಿದಾಸರು ಎಲ್ಲರೂ ನನ್ನ ಬಾಂಧವರೆಂಬ ವಿಶಾಲವಾದ ಮನೋಭಾವ ನೀಡಿ, ನಾಮಸ್ಮರಣದ ಮೂಲಕ ವೈಷ್ಣವದ್ವೇಷಭಾವನೆಯನ್ನು ಸುಟ್ಟು, ಅವರಲ್ಲಿ ಎಂದೂ ಕೋಪಬಾರದಂತೆ ನೋಡಿಕೊಳ್ಳು, ನಮ್ಮನ್ನು ಕಾಪಾಡು.

ಭಾಗವತ ಹೇಳುವಂತೆ ತ್ರಿಮೂರ್ತಿಗಳಲ್ಲಿ ನೀನೊಬ್ಬನೇ ಕೋಪಕ್ಕೆ ವಶನಾಗದವನೆಂಬ ಕೀರ್ತಿ ಉಳ್ಳವನು. ನನ್ನಲ್ಲಿ ಕೋಪಮಾಡದೆ ನನ್ನ ಕೋಪವನ್ನು ಕ್ಷಮಿಸು, ನನ್ನನ್ನು ಸದಾ ಕಾಪಾಡು.

★

අవలోకన

# ಹರೀಚ್ಛೆಯ ಪಾತ್ರ ಎದ್ದು ಕಾಣುವುದು

**–ಸಗ್ರಿ ರಾಘವೇಂದ್ರ ಉಪಾಧ್ಯಾಯ**

ಯಾವುದೇ ಕಾರ್ಯ ನಡೆಯಬೇಕಾದರೂ ಶ್ರೀಹರಿಯ ಇಚ್ಛೆ ಮೂಲಕಾರಣವಾಗಿ ಇದ್ದೇ ಇರುವುದು. ಆಯಾ ಕಾರ್ಯ ನಡೆಯುವಂತೆ ಬಯಸುವ ಭಗವಂತ **'ಇಚ್ಛಾಮಾತ್ರಂ ಪ್ರಭೋಃ ಸೃಷ್ಟಿಃ'–** ಎಂದಿರುವಂತೆ ಬರೇ ತನ್ನ ಇಚ್ಛೆಯಿಂದಲೇ ಆಯಾ ಕಾರ್ಯವನ್ನು ನಡೆಸಲು ಸಮರ್ಥನಾದರೂ ಲೋಕದಲ್ಲಿ ಅಂತಹ ಕಾರ್ಯ ನಡೆಯಲು ಏನೇನು ಕಾರಣಗಳು ಬೇಕೋ ಅವನ್ನೆಲ್ಲ ಬಳಸಿಕೊಂಡೇ ಆಯಾ ಕಾರ್ಯ ನಡೆಯುವಂತೆ ಮಾಡುವವನು ಹೊರತು ಯಾವುದೇ ಕಾರ್ಯವನ್ನು ಬರೇ ತನ್ನ ಇಚ್ಛೆಯಿಂದಲೇ ನಡೆಸುವುದಿಲ್ಲ.

ಹೀಗೆ ಪ್ರತಿಯೊಂದು ಕಾರ್ಯ ನಡೆಯಲೂ ಇತರ ಕಾರಣಗಳಂತೆ ಭಗವದಿಚ್ಛೆಯೂ ಕಾರಣವಾಗಿರುವುದರಿಂದ, ಹಾಗೆಯೇ ಭಗವದಿಚ್ಛೆಯಂತೆ ಇತರ ಕಾರಣಗಳೂ ಇರುವುದರಿಂದ ಯಾವುದೇ ಕಾರ್ಯದ ಸಂಘಟನೆಯ ವಿಷಯದಲ್ಲಿ ಭಗವದಿಚ್ಛೆಯನ್ನು ವಿಶೇಷವಾಗಿ ಕಾರಣ ಎಂದು ಉಲ್ಲೇಖಿಸುವುದಾಗಲೀ, ಕಾಲ, ಆಕಾಶ, ಅದೃಷ್ಟ ಇತ್ಯಾದಿಗಳಂತೆ ಕಾರ್ಯ ಸಾಮನ್ಯವನ್ನು ಕುರಿತು ಕಾರಣವೆನಿಸಿರುವ ಭಗವದಿಚ್ಛೆಯನ್ನು ಕಾಲಾದಿಗಳನ್ನು ಹೇಗೋ ಹಾಗೆ ಪ್ರತ್ಯೇಕವಾಗಿ ಕಾರಣವನ್ನಾಗಿ ಉಲ್ಲೇಖಿಸುದಾಗಲೀ ಅಷ್ಟೊಂದು ಉಚಿತವೆನಿಸದು.

ಆದರೆ ಶ್ರೀಮದ್ವಗುರುಗಳು ತಮ್ಮ ಮಹಾಭಾರತತಾತ್ಪರ್ಯ ನಿರ್ಣಯದಲ್ಲಿ ಐದಾರು ಕಡೆಗಳಲ್ಲಿ ಕೆಲವು ವಿಶಿಷ್ಟ ಘಟನೆಗಳ ಸಂಘಟನೆಯಲ್ಲಿ 'ಹರೀಚ್ಛೆ', 'ದೈವ', 'ನಿಯತಿ'– ಇತ್ಯಾದಿ ಹೆಸರುಗಳಿಂದ ಭಗವಂತನ ಇಚ್ಛೆಯ ಪಾತ್ರವನ್ನು ಪ್ರತ್ಯೇಕವಾಗಿ, ವಿಶೇಷವಾಗಿ ಉಲ್ಲೇಖಿಸಿದ್ದಿದೆ. ದ್ರೋಣಾಚಾರ್ಯರ ಚರಿತ್ರೆಯಲ್ಲಂತೂ ಮೂರು ಘಟನೆಗಳ ಸಂಘಟನೆಯಲ್ಲಿ ಭಗವದಿಚ್ಛೆಯನ್ನು ಪ್ರತ್ಯೇಕವಾಗಿ ಕಾರಣವನ್ನಾಗಿ ಸಾರಿರುವರು.

## ದ್ರೋಣಾಚಾರ್ಯರ ಚರಿತ್ರೆಯಲ್ಲಿ

ಶಿಲೋಂಛವೃತ್ತಿಯನ್ನು ಅಳವಡಿಸಿಕೊಂಡು, ಪ್ರತಿಗ್ರಹದಿಂದ ನಿವೃತ್ತರಾಗಿ ಬದುಕುತ್ತಿದ್ದ

ದ್ರೋಣಾಚಾರ್ಯರು ತಮ್ಮ ಈ ಬಗೆಯ ನಿಷ್ಠ ಬ್ರಾಹ್ಮಣಧರ್ಮದಿಂದ ಕ್ರಮೇಣ ಜಾರಲು ಕಾರಣವಾದ ಮೊತ್ತ ಮೊದಲ ಘಟನೆ ಎಂದರೆ ಹಾಲಿಗಾಗಿ ಅಳುತ್ತಿದ್ದ ಪುತ್ರ ಅಶ್ವತ್ಥಾಮಾಚಾರ್ಯರ ಕುರಿತಾದ ಪುತ್ರ ವ್ಯಾಮೋಹಕ್ಕೊಳಗಾಗಿ ಹಸುವನ್ನು ಸಂಪಾದಿಸಲು ತೊಡಗಿದ್ದು, ಈ ಘಟನೆಗೆ ಪುತ್ರ ಸ್ನೇಹ ಹಾಗೂ ಕೃಪೆಯ ಜೊತೆಗೆ **'ನಿಯತ್ಯೈವ ಜನಾರ್ದನಸ್ಯ ಸಂಪ್ರೇರಿತಃ'** (ಮಾ.ಭಾರ.ತಾನಿ. 15–10) ಭಗವಂತನ ನಿಯತಿ ಅರ್ಥಾತ್ ಸಂಕಲ್ಪ ಇದರ ಪ್ರೇರಣೆಯನ್ನೂ ಪ್ರತ್ಯೇಕವಾಗಿ ಕಾರಣವನ್ನಾಗಿ ಸಾರಲಾಗಿದೆ.

ಬಾಲ್ಯ ಸ್ನೇಹಿತನಾದ ದ್ರುಪದನಲ್ಲಿ ಗೋವನ್ನು ಪ್ರತಿಗ್ರಹಿಸಲು ತೆರಳಿದ ದ್ರೋಣರನ್ನು ದರಿದ್ರನಾದ ನೀನು ರಾಜನಾದ ನನ್ನ ಗೆಳೆಯ ಆಗಲು ಸಾಧ್ಯವೇ ಇಲ್ಲ, ಆದ್ದರಿಂದ ಬಂದಂತೆಯೇ ಹಿಂದೆ ತೆರಳು– ಎಂದು ವಿವೇಕಿಯಾದ ದ್ರುಪದ ಅವಮಾನಿಸಿರುವುದರಲ್ಲೂ ಭಗವದಿಚ್ಛೆಯ ಕಾರಣತ್ವವನ್ನು **'ದೈವಾತ್'** (ಮ.ಭಾರ.ತಾ.ನಿ. 15–22) ಎಂಬ ಶಬ್ದದಿಂದ ತಿಳಿಸಿರುವಂತೆ ದ್ರುಪದ ಈ ಬಗೆಯ ಪ್ರತಿಕ್ರಿಯೆಯನ್ನು ಕೇಳಿದಾಕ್ಷಣ ದ್ರೋಣರಿಗೆ ದ್ರುಪದನ ವಿರುದ್ಧ ಕೋಪ ಉಂಟಾದುದರಲ್ಲೂ ಹರೀಚ್ಛೆಯೇ ಕಾರಣ ಎಂದ ಸಾರಲಾಗಿದೆ– **'.......ಸ್ಯಾಽಶು ಬಭೂವ ಕೋಪೋ ಜಿತೇಂದ್ರಿಯಸ್ಯಾಪಿ ಮುನೇರ್ಹರೀಚ್ಛಯಾ'** (ಮ.ಭಾರ.ತಾ.ನಿ.15–22) ಯಾಕೆಂದರೆ ಶಿಲೋಂಛವೃತ್ತಿಯನ್ನು ಅಳವಡಿಸಿಕೊಂಡಿದ್ದ ದ್ರೋಣರು ಸಾಕಷ್ಟು ಇಂದ್ರಿಯನಿಗ್ರಹವುಳ್ಳವರಾಗಿದ್ದರು. **'ಮಾನಾಪಮಾನಯೋಃ ತುಲ್ಯಃ'**– ಎಂಬ ಜ್ಞಾನಿಯ ಲಕ್ಷಣವನ್ನು ಅಳವಡಿಸಿಕೊಂಡಿದ್ದ ಮುನಿಗಳಾಗಿದ್ದರು. ಇಂತಹವರಿಗೂ ದ್ರುಪದನ ಆ ಮಾತನ್ನು ಕೇಳಿದಾಕ್ಷಣ ಸಿಟ್ಟು ಬರಬೇಕೆಂದರೆ ಅದರಲ್ಲಿ ಶ್ರೀಹರಿಯ ಇಚ್ಛೆಯ ಪಾತ್ರವೇ ಅಧಿಕ–ಎಂಬುದು ಶ್ರೀಮದ್ವರ ಆಂತರ್ಯ.

ತಾನು ಬ್ರಾಹ್ಮಣ ಧರ್ಮವನ್ನು ತ್ಯಜಿಸುವಂತಾಗಬಾರದೆಂದು ಧನುಸ್ಸನ್ನು ಹಿಡಿಯಲು ಹಿಂಜರಿದಿದ್ದ ದ್ರೋಣಾಚಾರ್ಯರು ಭೀಮನಿಗೆ ಭೀತರಾದ ದುರ್ಯೋಧನಾದಿಗಳು ಶರಣಾಗತರಾಗಲು ಅಶ್ವತ್ಥಾಮಾಚಾರ್ಯರಿಂದ ಸಹಿತವಾಗಿ ಯುದ್ಧದಲ್ಲಿ ತೊಡಗಿದರೆಂದ ಶ್ರೀಮದ್ವರು–**'ಏವಂ ಹರೀಚ್ಛಯೈವಾಸೌಕ್ಷಾತ್ರಂ ಧರ್ಮಮುಪಾಯಿವಾನ್'** (ಮ.ಭಾರ.ತಾ.ನಿ.18–94) ಭಗವದಿಚ್ಛಾನುಸಾರವಾಗಿಯೇ ದ್ರೋಣಾಚಾರ್ಯರು ಯುದ್ಧ ನಡೆಸುವ ಕ್ಷತ್ರಧರ್ಮವನ್ನು ಸ್ವೀಕರಿಸಿದರೆಂದು ಪ್ರತಿಪಾದಿಸಿರುವರು.

**ಇನ್ನು ಕೆಲವೆಡೆ–** ಹೀಗೆ ದ್ರೋಣಾಚಾರ್ಯರ ಚರಿತ್ರೆಯ ಮೂರು ಘಟನೆಗಳಿಗೆ ಸಂಬಂಧಿಸಿದಂತೆ ಹರೀಚ್ಛೆಯನ್ನು ವಿಶೇಷವಾಗಿ ಉಲ್ಲೇಖಿಸಿರುವ ಶ್ರೀಮದ್ವರು, 'ನರಕಾಸುರ

ಶ್ರೀಹರಿಯಿಂದ ಧರಾದೇವಿಯಲ್ಲಿ ಹುಟ್ಟಿದ್ದರೂ ಹರೀಚ್ಛೆಯಿಂದಲೇ ಅಸುರನಾಗಿದ್ದ'– **'.....ಹರೇಃ ಸುತತ್ವೇಽಪಿ ತದಿಚ್ಛಯಾಽಸುರಾತ್'** ಎಂದು ನಿರೂಪಿಸಿರುವರು. (11–230), ಪಾಂಡವರ ಶಿಬಿರವನ್ನು ಪ್ರವೇಶಿಸಲು ತೊಡಗಿದ್ದ ಅಶ್ವತ್ಥಾಮಾಚಾರ್ಯರನ್ನು ತಡೆದ ರುದ್ರದೇವ ತನ್ನದೇ ರೂಪರಾದ ಅಶ್ವತ್ಥಾಮಚಾರ್ಯರ ಜೊತೆಗೆ ಕಾದಾಡಿದಲ್ಲದೆ ಅವರು ಪ್ರಯೋಗಿಸಿದ ಆಯುಧಗಳನ್ನೆಲ್ಲ ನುಂಗಿದ ಘಟನೆಯನ್ನು ಸಮರ್ಥಿಸುತ್ತ **'ಅಚಿಂತ್ಯಾ ಹರಿಶಕ್ತಿರ್ಹಿ ದೃಶ್ಯಂತೇಽತ್ಮಹನೋಽಪಿ ಹಿ ಅತಸ್ತಯಾ ಪ್ರೇರಿತೇನ ಸ್ವಾತ್ಮನೈವಾಖಿಲೇಷ್ವಪಿ ಆಯುಧೇಷು ನಿಗೀರ್ಣೇಷು.....'** (ಮ.ಭಾರ.ತಾ.ನಿ. 28–128,129) ಭಗವಂತನ ಅಚಿಂತ್ಯ ಶಕ್ತಿಗೊಳಗಾಗಿ ಆತ್ಮಹತ್ಯೆ ಮಾಡಿಕೊಳ್ಳುವಂತೆ ರುದ್ರದೇವ ತನ್ನ ಒಂದು ರೂಪದಿಂದ ಪ್ರಯೋಗಿಸಿದ ಆಯುಧಗಳನ್ನು ಮತ್ತೊಂದು ರೂಪದಿಂದ ಕಬಳಿಸಿದರು. ಎಂದು ಭಗವಂತನ ಅಚಿಂತ್ಯಶಕ್ತಿಯ ಪಾತ್ರವನ್ನು ಎತ್ತಿ ಸಾರಿರುವರು.

ಆಕಸ್ಮಿಕ, ಯಾದೃಚ್ಛಿಕ: ಸಾಮಾನ್ಯ ವ್ಯವಹಾರದಲ್ಲೂ ಉಳಿದ ಕಾರಣಗಳ ಪಾತ್ರ ಎದ್ದು ಕಾಣದಾದಾಗ ಆ ಘಟನೆ 'ಆಕಸ್ಮಿಕ'ವಾಗಿ ನಡೆಯಿತು. 'ಯಾದೃಚ್ಛಿಕ'ವಾಗಿ ನಡೆಯಿತು ಎಂದು ಹೇಳಲಾಗುವುದು. ಈ ಶಬ್ದಗಳಿಗೆ ಮೇಲ್ನೋಟದ ಅರ್ಥ ಉಳಿದ ಸಮರ್ಥ ಕಾರಣಗಳಿಲ್ಲದೆ ಬರೇ ಭಗವದಿಚ್ಛೆಯಿಂದ, ಅದೃಷ್ಟದಿಂದ ನಡೆಯಿತೆಂದು. ಆದರೆ ಸಮರ್ಥ ಕಾರಣಗಳಿಲ್ಲದೆ ಯಾವ ಕಾರ್ಯವೂ ನಡೆಯಲಾರದು. ಆದ್ದರಿಂದ 'ಯಾದೃಚ್ಛಿಕ' 'ಆಕಸ್ಮಿಕ'– ಶಬ್ದಗಳಿಗೆ 'ಯದೃಚ್ಛಾ ಚ ತದಿಚ್ಛಾ ಸ್ಯಾತ್....' ಎಂದಿರುವಂತೆ ಯದೃಚ್ಛಾ ಎನಿಸುವ ಭಗವದಿಚ್ಛೆಯ ಪಾತ್ರ ಎದ್ದು ಕಾಣುವಂತೆ ನಡೆಯಿತು. ಎಲ್ಲರಿಗಿಂತ ವಿಲಕ್ಷಣನಾಗಿದ್ದು 'ಅಕಸ್ಮಾತ್' ಎನಿಸುವ ಭಗವಂತನ ಪಾತ್ರ ವಿಶೇಷ ಇರುವಂತೆ ನಡೆದ ಘಟನೆ 'ಆಕಸ್ಮಿಕ' ಎಂದು. ಆದರೆ ಈ ಆಂತರ್ಯದ ಅರಿವಿಲ್ಲದೆಯೇ ಪರಿಪೂರ್ಣ ಕಾರಣಗಳಿಲ್ಲದೆಯೇ ನಡೆದ ಘಟನೆ ಎಂಬ ಅರ್ಥದಲ್ಲಿ 'ಆಕಸ್ಮಿಕ' 'ಯಾದೃಚ್ಛಿಕ' ಎಂಬ ಶಬ್ದಗಳನ್ನು ಪ್ರಯೋಗಿಸಲಾಗುವುದು. ಪರಿಪೂರ್ಣಕಾರಣಗಳಿಲ್ಲದೆ ಯಾವುದೇ ಕಾರ್ಯ ಹೇಗೆ ತಾನೇ ಸಂಭವಿಸಿತೆಂಬುದನ್ನು ವಿವೇಚಿಸಲಾಗುವುದಿಲ್ಲ.

**ಹೇತುರುಚ್ಯತೇ–** ಹೀಗೆ ಶ್ರೀಮಧ್ವರು ಕೆಲವು ಘಟನೆಗಳ ಸಂಘಟನೆಯಲ್ಲಿ ಭಗವದಿಚ್ಛೆಯ ಪಾತ್ರವನ್ನು ಪ್ರತ್ಯೇಕವಾಗಿ, ವಿಶೇಷವಾಗಿ ಯಾವ ಅಭಿಪ್ರಾಯದಲ್ಲಿ ಉಲ್ಲೇಖಿಸಿರುವರೆಂಬುದನ್ನು ಭಗವದ್ಗೀತೆಯ 'ಕಾರ್ಯಕಾರಣಕರ್ತೃತ್ವೇ....' (13–21) ಎಂಬ ಶ್ಲೋಕದ ಅವರ ವ್ಯಾಖ್ಯಾನ ಸೂಚಿಸಿಕೊಡಬಲ್ಲದು. ಅದರಲ್ಲಿ ಶರೀರ ಇಂದ್ರಿಯಾದಿಗಳ ನಿರ್ಮಾಣದಲ್ಲಿ ಪ್ರಕೃತಿಯೂ,

ಅವುಗಳಿಂದ ಬರತಕ್ಕ ಸುಖ ದುಃಖಾದಿಗಳ ಭೋಗದಲ್ಲಿ ಭಗವಂತನೂ ಕಾರಣ ಎಂದು ಹೇಳಲ್ಪಡುವುದೆಂದು ತಿಳಿಸಲಾಗಿದೆ. ಭಗವಂತ ಎಲ್ಲದ್ದಕ್ಕೂ ಕಾರಣನಾಗಿರುವನಾದರೂ ಸುಖದುಃಖಗಳ ಭೋಗಕ್ಕೆ ವಿಶೇಷವಾಗಿ ಕಾರಣ ಎಂದು ಯಾಕೆ ಹೇಳಲ್ಪಡುವನೆಂಬುದನ್ನು ಶ್ರೀಮಧ್ವರು ತಮ್ಮ ಗೀತಾತಾತ್ಪರ್ಯದಲ್ಲಿ ಹೀಗೆ ಸಮರ್ಥಿಸಿರುವರು. ಭಗವಂತನೇ ಶರೀರಾದಿಗಳ ನಿರ್ಮಾಣದಲ್ಲೂ, ಸುಖಾದಿಗಳ ಭೋಗದಾನದಲ್ಲೂ ಕಾರಣನಾಗಿರುವನಾದರೂ ಚಿತ್ ಪ್ರಕೃತಿಗೆ ಶರೀರಾದಿಗಳ ನಿರ್ಮಾಣದ ವಿಷಯದಲ್ಲಿ ಸುಖಾದಿಗಳ ಭೋಗದಾನದ ವಿಷಯ ದಲ್ಲಿಯ ಕಾರಣತ್ವಕ್ಕಿಂತಲೂ ಕಿಂಚಿತ್ ಪ್ರಮಾಣದಲ್ಲಿ ಅಧಿಕ ಕಾರಣತ್ವ ಇದೆ, ಸುಖಾದಿಗಳ ಭೋಗದಾನದ ವಿಷಯದಲ್ಲಿ ಬರೇ ಅಲ್ಪ ಕಾರಣತ್ವ ಇರುವುದರಿಂದ ಚಿತ್ ಪ್ರಕೃತಿಯ ಕಾರಣತ್ವದ ಆಧಾರದ ಮೇಲೆ ಶರೀರಾದಿಗಳ ನಿರ್ಮಾಣದಲ್ಲಿ ಚಿತ್ ಪ್ರಕೃತಿ ಕಾರಣ ಎಂದು ಹೇಳಲ್ಪಡುವಳು, ಸುಖದ ಭೋಗದಾನದ ವಿಷಯದಲ್ಲಿ ಆಕೆಗೆ ಅಷ್ಟೊ ಕಾರಣತ್ವ ಇಲ್ಲದ ಪ್ರಯುಕ್ತ ಆಕೆ ಕಾರಣ ಎಂದು ಹೇಳಲ್ಪಡುವುದಿಲ್ಲ, ಅದರ ಬದಲಾಗಿ ಭಗವಂತನೇ ಆ ವಿಷಯದಲ್ಲಿ ಕಾರಣ ಎಂದು ಹೇಳಲ್ಪಡುವನಷ್ಟೆ ಹೊರತು ಭಗವಂತನಿಗೆ ಸುಖಾದಿಗಳ ಭೋಗದಾನದಲ್ಲಷ್ಟೇ ಕಾರಣತ್ವ ಇದೆ ಎಂಬ ಅಭಿಪ್ರಾಯವಲ್ಲ.

ಅಲ್ಲದೆ ಶ್ರೀ ವಿಷ್ಣು ಎಲ್ಲದಕ್ಕೂ ಕರ್ತೃ ಆಗಿರುವನಾದರೂ ಸುಖ ದುಃಖಗಳ ಭೋಗದಾನದಲ್ಲಿ ವಿಶೇಷಕರ್ತೃ ಆಗಿರುವುದರಿಂದ ಅದನ್ನು ವಿಶೇಷವಾಗಿ ಉಲ್ಲೇಖಿಸಲಾಗುವುದು. ಹೇಗೆ ಸರ್ವರಕ್ಷಕನಾದ ಭಗವಂತನನ್ನು ಅವನು ವೈಕುಂಠವನ್ನು ವಿಶೇಷವಾಗಿ ರಕ್ಷಿಸುವನೆಂಬ ಅಭಿಪ್ರಾಯದಲ್ಲಿ 'ವಿಕುಂಠಪ'– ಎಂದು ವಿಶೇಷವಾಗಿ ಉಲ್ಲೇಖಿಸಲಾಗುವುದೋ ಹಾಗೆ.

ಈ ಸಮರ್ಥನೆಯಂತೆಯೇ ಭಗವಂತನ ಇಚ್ಛೆ ಪ್ರತಿಯೊಂದು ಘಟನೆಯ ಸಂಘಟನೆಗೂ ಕಾರಣ ಆಗಿಯೇ ಇರುವುದಾದರೂ ಯಾವ ಘಟನೆಯ ಸಂಘಟನೆಯಲ್ಲಿ ಇತರ ಕಾರಣಗಳ ಪಾತ್ರ ಎದ್ದು ಕಾಣುವುದಿಲ್ಲವೋ ಆ ಘಟನೆಯ ನಿರ್ವಹಣೆಯಲ್ಲಿ ಭಗವದಿಚ್ಛೆಯ ಪಾತ್ರವನ್ನು ವಿಶೇಷವಾಗಿ ಉಲ್ಲೇಖಿಸಲಾಗುವುದು. ಅಂತಯೇ ಕೆಲವು ಘಟನೆಗಳ ಸಂಘಟನೆಯಲ್ಲಿ ಭಗವದಿಚ್ಛೆ ವಿಶೇಷವಾಗಿ ಪಾತ್ರ ವಹಿಸುವುದರಿಂದ ಅದರ ಆಧಾರದ ಮೇಲೆಯೇ ಅಂತಹ ಕೆಲವು ಘಟನೆಗಳ ಸಂಘಟನೆಯಲ್ಲಿ ಭಗವದಿಚ್ಛೆಯನ್ನು ವಿಶೇಷವಾಗಿ, ಪ್ರತ್ಯೇಕವಾಗಿ ಕಾರಣವನ್ನಾಗಿ ಉಲ್ಲೇಖಿಸಲಾಗುವುದು. 'ಯಾದೃಚ್ಛಿಕ', 'ಆಕಸ್ಮಿಕ' ಶಬ್ದಗಳ ಪ್ರಯೋಗದ ಹಿನ್ನೆಲೆಯೂ ಇದೇ.

★

ಭಾರತಭಾವದರ್ಪಣ

ಭಾಗ: 16

# ಆತ್ಮ ನಿಯಂತ್ರಣದ ವಿದ್ಯಾರ್ಥಿ

–ವಿ॥ ರಾಮವಿಟ್ಠಲಾಚಾರ್ಯ ಬೆಂಗಳೂರು

ಆಗಾಗ ನಡೆಯುವಂತೆ ದೇವ–ದಾನವರ ನಡುವೆ ಒಡೆತನಕ್ಕಾಗಿ ಕದನ ನಡೆದಿತ್ತು. ದೇವತೆಗಳು ಗೆಲುವಿಗಾಗಿ ಬೃಹಸ್ಪತಿಯನ್ನು, ದಾನವರು ಶುಕ್ರಾಚಾರ್ಯರನ್ನು ಶರಣಾಗಿದ್ದರು. ಹೀಗೆ ವಿದ್ವಾಂಸರಾದ ಬ್ರಾಹ್ಮಣರಿಬ್ಬರೂ ವಿರೋಧಿ ತಂಡಗಳ ನಾಯಕರಾಗಿ ಸ್ಪರ್ಧೆಗಿಳಿಯುವ ರೋಚಕ ಸಂದರ್ಭವಾಗಿತ್ತು. ದೇವತೆಗಳೆಲ್ಲ ಕಾದಲು ಬರುತ್ತಿದ್ದ ದಾನವರನ್ನೆಲ್ಲ ಕೊಂದು ಹಾಕುತ್ತಿದ್ದರು. ಅವರನ್ನೆಲ್ಲ ಶುಕ್ರಾಚಾರ್ಯರು ತಮ್ಮ ಸಂಜೀವಿನಿ ವಿದ್ಯೆಯ ಬಲದಿಂದ ಮತ್ತೆ ಬದುಕಿಸುತ್ತಿದ್ದರು. ಹೀಗೆ **ಪುನರಪಿ ಜನನಂ ಪುನರಪಿ ಮರಣಂ ಪುನರಪಿ ಜನನಂ ಪುನರಪಿ ಸಮರೇ ದಾರುಣ ಮರಣಮ್** ಎಂದಾಗಿತ್ತು. ಆದರೆ ಅಸುರರು ಸುರರನ್ನು ಸಾಯಿಸಿದರೆ ಅವರನ್ನು ಬೃಹಸ್ಪತಿಗಳು ಮತ್ತೆ ಬದುಕಿಸಲು ಆಗುತ್ತಿರಲಿಲ್ಲ. ಇದರಿಂದ ದೇವತೆಗಳು ಕಳವಳಗೊಂಡರು. ಬೃಹಸ್ಪತಿ ಆಚಾರ್ಯರ ಜ್ಯೇಷ್ಠ ಪುತ್ರ ಕಚನಲ್ಲಿ ದೇವತೆಗಳು ವಿಜ್ಞಾಪಿಸಿದರು. ಹೇಗಾದರೂ ಮಾಡಿ ಶುಕ್ರಾಚಾರ್ಯರ ಶಿಷ್ಯತ್ವ ವಹಿಸಿ ಸಂಜೀವಿನಿ ವಿದ್ಯೆಯನ್ನು ಕಲಿತು ಬನ್ನಿ. ನಮ್ಮನ್ನು ರಕ್ಷಿಸಿರಿ. ವೃಷಪರ್ವರಾಜನ ಬಳಿಯಲ್ಲಿ ಶುಕ್ರಾಚಾರ್ಯರು ಸಿಗುವರು. ಅವರು ದಾನವರನ್ನು ಮಾತ್ರ ರಕ್ಷಣೆ ಮಾಡುತ್ತಿದ್ದಾರೆ. ದಾನವೇತರರಾದ ನಮ್ಮನ್ನು ಕಾಪಾಡುತ್ತಿಲ್ಲ. ಎಳೆ ವಯಸ್ಸಿನ ವಿದ್ಯಾವಂತರಾದ ತಾವು ಸಹನೆಯಿಂದ ಅವರ ಶಿಷ್ಯತ್ವ ವಹಿಸಿ ಪ್ರೀತಿಗಳಿಸಬೇಕು. ಅದಕ್ಕೆ ಉಪಾಯವೆಂದರೆ ಅವರ ಮಮತೆಯ ಮಗಳು ದೇವಯಾನಿಯನ್ನು ಶೀಲ, ದಾಕ್ಷಿಣ್ಯ, ಮಾಧುರ್ಯ, ಆಚಾರ, ಇಂದ್ರಿಯನಿಗ್ರಹಗಳಿಂದ ಒಲಿಸಿಕೊಳ್ಳಬೇಕು. ದೇವಯಾನಿಯನ್ನು ಸಂತೋಷಗೊಳಿಸಿದರೆ ಸಂಜೀವಿನಿ ವಿದ್ಯೆಯನ್ನು ಪಡೆಯುವುದು ಸುಲಭ.

ದೇವತೆಗಳಿಂದ ಸತ್ಕಾರಗೊಂಡು ಕಚ ತಡಮಾಡದೆ ವೃಷಪರ್ವರಾಜನ ಪ್ರದೇಶಕ್ಕೆ ಬಂದ. ಶುಕ್ರಾಚಾರ್ಯರನ್ನು ಭೇಟಿ ಮಾಡಿ ನಮಸ್ಕರಿಸಿದ. ನಾನು ಅಂಗಿರಸರ ಮೊಮ್ಮಗ. ಬೃಹಸ್ಪತಿಗಳ ಮಗ. ಹೆಸರು ಕಚ. ನನ್ನನ್ನು ನಿಮ್ಮ ಶಿಷ್ಯನನ್ನಾಗಿ ಮಾಡಿಕೊಳ್ಳಿ. ಪರಮಬ್ರಹ್ಮಚರ್ಯೆಯಿಂದ ಇರುತ್ತೇನೆ. ಒಂದು ಸಾವಿರ ವರ್ಷ ನಿಮ್ಮಲ್ಲಿ ಶಿಷ್ಯನಾಗಿರಲು ಅನುಮತಿಯಿತ್ತು ಅನುಗ್ರಹಿಸಬೇಕು.

ಕಚ! ನಿನಗೆ ಸುಸ್ವಾಗತ. ನಿನ್ನ ಮಾತನ್ನು ಪರಿಗ್ರಹಿಸುತ್ತೇನೆ. ನಿನ್ನನ್ನು ಸತ್ಕರಿಸುತ್ತೇನೆ. ಆ ಗೌರವ ಸತ್ಕಾರಗಳು ಬೃಹಸ್ಪತಿಗಳಿಗೆ ತಲುಪಲಿ. ಕಚ ಶುಕ್ರರು ಹೇಳಿದ ದೀಕ್ಷಾವ್ರತವನ್ನು ಕೈಗೊಂಡ. ಸಕಾಲದಲ್ಲಿ ಶುಕ್ರರು ಶಿಷ್ಯನನ್ನಾಗಿ ಪರಿಗ್ರಹಿಸಿದರು. ಅಂದಿನಿಂದಲೆ ಪುಟಿದ ಚೆಂಡಿನಂತೆ ಉತ್ಸಾಹದ ಬುಗ್ಗೆಯಾಗಿ ತರುಣ ಕಚ ಮಧುರಗಾನ, ನರ್ತನ, ಸಂಗೀತದ ವಿವಿಧ ವಾದ್ಯಗಳ ವಾದನಗಳಿಂದ ಸುಸಂಸ್ಕೃತ ಸಭ್ಯನಡವಳಿಕೆಗಳಿಂದ ಯುವತಿ ದೇವಯಾನಿಯನ್ನು ಸಂತೋಷಪಡಿಸುತ್ತಿದ್ದ. ಬಗೆ ಬಗೆಯ ಕುಸುಮಗಳು ವಿವಿಧ ರುಚಿಯ ಸವಿ ಹಣ್ಣುಗಳನ್ನು ತಂದಿತ್ತು ದೇವಯಾನಿಯನ್ನು ಉಲ್ಲಾಸಗೊಳಿಸುತ್ತಿದ್ದ. ಕಚನ ನಡವಳಿಕೆಯ ಸಭ್ಯತೆಯನ್ನು ನಂಬಿ ಮೆಚ್ಚಿದ ದೇವಯಾನಿಯು ಹಾಡುತ್ತ ಲಲ್ಲೆಯಾಡುತ್ತ ಕಚನೊಂದಿಗೆ ಏಕಾಂತವನ್ನು ರಸಭರಿತವಾಗಿ ಅನುಭವಿಸುತ್ತಿದ್ದಳು.

ಹೀಗೆ ಕಚದೇವಯಾನಿಯ ಸರಸದ ಒಡನಾಟಗಳ ಕಂತು ಐದುನೂರು ವರುಷಗಳು ದಾಟಿದವು.

ದೇವಗುರು ಬೃಹಸ್ಪತಿಯ ಸುಕುಮಾರ ದೇವಯಾನಿಯಲ್ಲಿ ಸಲುಗೆ ಬೆಳೆಸಿಕೊಂಡು ಶುಕ್ರಾಚಾರ್ಯರ ಸಂಜೀವಿನಿ ವಿದ್ಯೆಯನ್ನು ಪಡೆದುಬಿಟ್ಟರೆ! ಎಂದು ಸಂಶಯಿಸಿದರು ಅಸುರರು. ದೇವಯಾನಿಯ ಮನದಭಿಮಾನಿ ಕಚನನ್ನು ಮುಗಿಸಲು ಸಂಚು ಹೂಡಿದರು.

ಅಂದೊಮ್ಮೆ ಕಚ ಕಾಡಿನಲ್ಲಿ ಗೋಪಾಲನೆ ಮಾಡುತ್ತಿದ್ದ. ಒಬ್ಬಂಟಿಯಾದ ಕಚನನ್ನು ಕೆಲ ಅಸುರರು ಸೇರಿ ಕೊಂದರು. ಸತ್ತ ದೇಹದ ಮಾಂಸವನ್ನು ತೋಳಗಳಿಗೆ ಹಂಚಿ ಹಾಕಿದರು. ಮುಸ್ಸಂಜೆ ಹಸುಗಳು ಮಾತ್ರ ಹಿಂತಿರುಗಿದವು ಆಶ್ರಮಕ್ಕೆ. ಕಚ ಬರಲಿಲ್ಲ. ದೇವಯಾನಿ ಶುಕ್ರರಲ್ಲಿ ಹೇಳಿದಳು. ತಮ್ಮ ಅಗ್ನಿಹೋತ್ರ ಮುಗಿಯಿತು. ಸೂರ್ಯ ಕಂತಿದ. ಗೋಪಾಲಕನಿಲ್ಲದೆ ಗೋವುಗಳು ಹಿಂತಿರುಗಿದವು. ನಿಶ್ಚಯವಾಗಿ ಅಸುರರು ಕಚನನ್ನು ಕೊಂದಿರಬೇಕು. ಅವನಿಲ್ಲದೆ ನಾನು ಬದುಕಲಾರೆ.

ದೇವಯಾನಿಯ ಖೇದವನ್ನು ನೋಡಿ ಶುಕ್ರಾಚಾರ್ಯರು ಬೇಸರಿಸದಿರು ಮಗಳೇ! ಸಂಜೀವಿನೀ ವಿದ್ಯೆಯನ್ನು ಪ್ರಯೋಗಿಸಿ ಕಚನನ್ನು ಬದುಕಿಸುತ್ತೇನೆಂದರು. ವಿದ್ಯೆಯನ್ನು ಶುಕ್ರರು ಜಪಿಸಿ ಕರೆದ ಕೂಡಲೆ ಕಚ ಎದ್ದು ಬಂದ. ಏಕೆ ತಡವಾಯಿತು? ಎಂದು ದೇವ ಯಾನಿ ಕೇಳಿದಳು. ಸಮಿತ್ತು ಕುಶದರ್ಭೆಗಳನ್ನು ಕಟ್ಟಿಗೆಗಳನ್ನು ಹೊತ್ತು ಹಿಂತಿರುಗಿ ಬರುತ್ತಿದ್ದೆ. ಶ್ರಮವಾಗಿ ಆಲದ ಮರದ ಕೆಳಗೆ ವಿಶ್ರಮಿಸಿದೆ. ಅಸುರರು ಬಂದು ನೀನಾರು? ಎಂದು ಕೇಳಿದರು. ಬೃಹಸ್ಪತಿ ಸುತ ನಾನು ಎಂದೊಡನೆ ಹೊಡೆದು ಕೊಂದು ದೇಹವನ್ನು ತೋಳಗಳಿಗೆ

ತಿನ್ನಲು ಹಾಕಿದರು. ನಿಮ್ಮ ತಂದೆ ಸಂಜೀವಿನೀ ವಿದ್ಯೆಯಿಂದ ನನ್ನನ್ನು ಬದುಕಿಸಿದರು ಎಂದನು.

ಮತ್ತೊಮ್ಮೆ ದೇವಯಾನಿಯು ತನಗೆ ಹೂವುಗಳನ್ನು ತಂದುಕೊಡು ಎಂದು ಕಚನನ್ನು ಕಾಡಿಗೆ ಕಳುಹಿಸಿದಳು. ದಾನವರು ಅವನನ್ನು ಮತ್ತೆ ಕೊಂದು ದೇಹವನ್ನು ಪುಡಿ ಮಾಡಿ ಸಮುದ್ರಕ್ಕೆ ಎಸೆದರು. ಮತ್ತೆ ಅಪ್ಪನಿಗೆ ದೂರಿದಳು. ಕಚ ಬಂದಿಲ್ಲ. ಪುನಃ ಸಂಜೀವಿನಿ ವಿದ್ಯೆಯ ಜಪದಿಂದ ಬದುಕಿಸಿದರು.

ಆದರೂ ಮತ್ತೆ ಅಸುರರು ಕಚನನ್ನು ಕೊಂದರು. ಅವನ ದೇಹವನ್ನು ಸುಟ್ಟು ಬೂದಿ ಮಾಡಿ ಆ ಬೂದಿಯನ್ನು ಸುರೆಗೆ ಬೆರೆಸಿ ಶುಕ್ರಾಚಾರ್ಯರಿಗೇ ಕೊಟ್ಟರು. ದೇವಯಾನಿ ಮತ್ತೆ ಮೊರೆ ಇಟ್ಟಳು. ಕಚನಿಲ್ಲದೆ ಬದುಕಲಾರೆ.

ಮಗಳೇ! ಕಚ ಸತ್ತಿದ್ದಾನೆ. ಅವನಿಗಾಗಿ ಕೊರಗಬೇಡ. ಎಷ್ಟು ಬಾರಿ ಬದುಕಿದರೂ ಮತ್ತೆ ಮತ್ತೆ ಸಾಯುತ್ತಿದ್ದಾನೆ. ಇಂದ್ರ ವಸು ಬ್ರಾಹ್ಮಣರಾದಿಯಾಗಿ ನಿನ್ನವರಾಗಿದ್ದಾರೆ. ಅವನಿಗಾಗಿ ಯಾಕೆ ಅಳುತ್ತಿ? ಶುಕ್ರಾಚಾರ್ಯರು ಸಮಾಧಾನ ಪಡಿಸಿದರು.

ದೇವಯಾನಿ ಎಂದಳು– ತುಂಬ ಹಿರಿಯರಾದ ಅಂಗಿರಸರು ಯಾರಿಗೆ ಪಿತಾಮಹನೋ ತಪೋ ನಿಧಿ ಬೃಹಸ್ಪತಿ ಯಾರಿಗೆ ತಂದೆಯೋ ಅಂತಹ ಕಚನ ಬಗ್ಗೆ ಅಳದೆ ಇರುವುದು ಹೇಗೆ?

ಅವನು ಸದ್ಯ ಬ್ರಹ್ಮಚಾರಿ. ತಪೋಧನ. ಸರ್ವದಾ ಕರ್ತವ್ಯದಲ್ಲಿ ಜಾಗೃತ. ಕಾರ್ಯದಕ್ಷ. ಅಂತಹ ಕಚನನ್ನು ಬಿಟ್ಟಿರಲಾರೆ. ಯಾವ ಭೋಗಗಳೂ ಬೇಡ. ನಾನೂ ಅವನನ್ನೇ ಹಿಂಬಾಲಿಸುತ್ತೇನೆ.

ಕಚನನ್ನು ಬದುಕಿಸುವುದು ಅಸುರರ ದ್ವೇಷಕ್ಕೆ ಕಾರಣವಾಗಿದೆ. ನಿರಪರಾಧಿ ಕಚನನ್ನು ಅಸುರರು ದ್ವೇಷ ಮಾಡುತ್ತಿದ್ದಾರೆ. ನಾನು ಬದುಕಿಸಿದರೆ ಅವರು ಮತ್ತೆ ಕೊಲ್ಲುತ್ತಾರೆ. ಆ ಬ್ರಹ್ಮಹತ್ಯೆ ನನ್ನನ್ನು ಕಾಡುತ್ತಿದೆ. ಬೇಡ ಬಿಡು ಎಂದರು ಶುಕ್ರಾಚಾರ್ಯರು.

ಮಗಳ ಆಗ್ರಹದಿಂದ ಶುಕ್ರಾಚಾರ್ಯರು ಕಚನನ್ನು ಮತ್ತೆ ಕರೆದರು. ಗುರುಗಳ ಉದರ ಸೀಳಿ ಹೊರ ಬರಬೇಕಾದ ಪ್ರಸಂಗ ಬಂತು. ಅದಕ್ಕೆ ಹೆದರಿ ಶುಕ್ರರ ಉದರದಿಂದಲೆ ಗುರುಗಳೇ ಪ್ರಸನ್ನರಾಗಿರಿ. ನಮಸ್ಕಾರ ಮಾಡುತ್ತಿದ್ದೇನೆ. ನಿಮ್ಮ ಮಗನೆಂದು ನನ್ನನ್ನು ಭಾವಿಸಿರಿ ಎಂದ.

ಅಚ್ಚರಿಯಿಂದ ಶುಕ್ರಾಚಾರ್ಯರು ಕೇಳಿದರು. ಹೇಗೆ ನನ್ನ ಉದರವನ್ನು ಪ್ರವೇಶಿಸಿದಿ

ಹೇಳು. ಅಸುರರು ನನ್ನನ್ನು ಕೊಂದು ನನ್ನ ದೇಹವನ್ನು ಸುಟ್ಟು ಆ ಬೂದಿಯನ್ನು ಸುರೆಯಲ್ಲಿ ಸೇರಿಸಿ ನಿಮಗೆ ಕೊಟ್ಟರು ಎಂದ.

ಮಗಳೇ ಹೇಳು ಕಚನನ್ನು ನೀನು ಬಯಸುವುದಾದರೆ ಅವನು ನನ್ನ ಉದರ ಸೀಳಿ ಬರಬೇಕು. ನಾನು ಸತ್ತು ಕಚನನ್ನು ಬದುಕಿಸಲೇ? ನಿನಗೆ ಯಾರು ಪ್ರಿಯರು ಹೇಳು.

ಅಪ್ಪ! ನನಗೆ ನೀವಿಬ್ಬರೂ ಬೇಕು. ಯಾರೂ ಸಾಯಬಾರದು. ಕಚನಿಲ್ಲದೆ ಸುಖವಿಲ್ಲ. ನೀನಿಲ್ಲದೆ ಬದುಕಿಲ್ಲ.

ಕಚ! ದೇವಯಾನಿಗೆ ನಾವಿಬ್ಬರೂ ಬೇಕಂತೆ. ನೀನು ಸಿದ್ಧರೂಪನಾದಿ. ನಿನಗೆ ಮೃತಸಂಜೀವಿನೀ ಮಂತ್ರವನ್ನು ಉಪದೇಶಿಸುತ್ತೇನೆ. ನೀನು ಕಚರೂಪದ ಇಂದ್ರನಲ್ಲದಿದ್ದರೆ ಸ್ವೀಕರಿಸು. ಮತ್ತೊಬ್ಬರು ನನ್ನ ಉದರ ಸೀಳಿ ಹೊರಬರುವ ಪ್ರಸಂಗಬಾರದಿರಲಿ. ನನ್ನ ಮಗನಂತಾಗಿ ದೇಹದಿಂದ ಹೊರಬಂದು ಮಂತ್ರ ಜಪಿಸಿ ನನ್ನನ್ನು ಬದುಕಿಸು ಎಂದು ಹೇಳಿ ಮಂತ್ರ ಉಪದೇಶಿಸಿದರು. ಶುಕ್ರಾಚಾರ್ಯರ ದೇಹ ಸೀಳಿ ಹೊರ ಬಂದ ಕಚ ಅದೇ ಮಂತ್ರವನ್ನು ತಾನು ಜಪಿಸಿ ಶುಕ್ರಾಚಾರ್ಯರನ್ನು ಬದುಕಿಸಿದ.

ನನ್ನ ಕಿವಿಗಳಿಗೆ ಮಂತ್ರಾಮೃತವನ್ನು ಸಿಂಚಿಸಿದ ತಾವು ತಂದೆ ತಾಯಿಗಳಂತೆ ಪೂಜ್ಯರಾಗಿದ್ದೀರಿ. ನಿಮಗೆ ನಾನು ದ್ರೋಹ ಬಗೆಯುವುದಿಲ್ಲ. ವಿದ್ಯೆ ಪಡೆದವನು ಅರ್ಚನೀಯ ಗುರುಗಳನ್ನು ಅನಾದರಿಸಿದರೆ ಪಾಪದ ಲೋಕಗಳನ್ನು ಸೇರುತ್ತಾನೆಂದು ಹೇಳಿ ಗುರುಗಳಿಗೆ ಮೋಸ ಮಾಡದೆ ಅವರನ್ನು ಬದುಕಿಸಿ ನಮಸ್ಕಾರ ಮಾಡಿದ.

ಸುರಾಪಾನದ ದುಷ್ಪರಿಣಾಮದಿಂದ ಮೋಹಿತವಾಗಿ ಕಚನ ದೇಹದ ಬೂದಿಯನ್ನು ನುಂಗಿ ಮತ್ತೊಬ್ಬನಿಗೆ ಸಂಜೀವಿನೀ ವಿದ್ಯೆ ಉಪದೇಶಿಸಬೇಕಾದ ಅನಿವಾರ್ಯತೆ ಬಂದದ್ದು ಶುಕ್ರಾಚಾರ್ಯರಿಗೆ ತುಂಬ ಕೋಪಕ್ಕೆ ಕಾರಣವಾಯಿತು.

ಬ್ರಾಹ್ಮಣ ಸಮುದಾಯವನ್ನು ಉದ್ದೇಶಿಸಿ ಉಚ್ಚಸ್ವರದಿಂದ ಘೋಷಣೆ ಮಾಡಿದರು. ಇಂದಿನಿಂದ ಬ್ರಾಹ್ಮಣರು ಸುರಾಪಾನ ಮಾಡಬಾರದು. ಯಾವ ಮಂದಬುದ್ಧಿ ವಿಪ್ರ ಮೋಹದಿಂದ ಸುರಾಪಾನವನ್ನು ಮಾಡುವನೋ ಅವನು ಧರ್ಮಬಾಹ್ಯನು ಬ್ರಹ್ಮಹತ್ಯೆ ಮಾಡಿದವನೂ ಆಗುವನು. ಈ ಧರ್ಮಮರ್ಯಾದೆಯನ್ನು ಲೋಕದಲ್ಲಿ ನಾನು ಇಂದಿನಿಂದ ಸ್ಥಾಪನೆ ಮಾಡುತ್ತಿದ್ದೇನೆ. ಗುರುಗಳಲ್ಲಿ ಗೌರವವಿರುವ ಎಲ್ಲ ಸಜ್ಜನವಿಪ್ರರೂ ಕೇಳಿರಿ.

ಬಳಿಕ ದಾನವರನ್ನು ಕರೆದು ಹೇಳಿದರು. ಮೂರ್ಖ ದಾನವರೇ! ನನ್ನ ಬಳಿ ವ್ರತ ನಿಷ್ಠನಾಗಿ ನಡೆದುಕೊಂಡ ಕಚ ಸಿದ್ಧ ಪುರುಷನಾಗಿದ್ದಾನೆ. ನನ್ನಿಂದ ಸಂಜೀವಿನೀ ಮಂತ್ರ

ಉಪದೇಶವನ್ನು ಪಡೆದು ನನ್ನಂತೆ ತುಲ್ಯ ಪ್ರಭಾವನಾಗಿದ್ದಾನೆ. ದೇವತೆಗಳ ಪರವಾಗಿ ಬಂದು ನನ್ನ ಬಳಿ ದುಷ್ಕರವಾದ ಸಾಧನೆ ಮಾಡಿದ್ದಾನೆ. ಇವನ ಕೀರ್ತಿಗೆ ಮುಪ್ಪು ಬಾರದಿರಲಿ. ಇವನು ಯಾಜ್ಞೀಯನಾಗುತ್ತಾನೆ. ದಾನವರು ಗುರುಗಳ ಮಾತು ಕೇಳಿ ವಿಸ್ಮಯಗೊಂಡು ತೆರಳಿದರು.

ಒಂದು ಸಾವಿರವರ್ಷದ ಕಠಿಣ ಪರಿಶ್ರಮದ ವ್ರತ ಪೂರೈಸಿ ಕಚ ಗುರುಗಳ ಅನುಮತಿ ಪಡೆದು ದೇವಲೋಕಕ್ಕೆ ಹಿಂತೆರಳಲು ಬಯಸಿದ.

ದೇವಯಾನಿಯು ಹೊರಟು ನಿಂತ ಕಚನಲ್ಲಿ ವಿಜ್ಞಾಪನೆಗೈದಳು ಕಚ! ಉತ್ತಮವಾದ ಚಾರಿತ್ರ್ಯ ಸಂಪನ್ನತೆ, ವಿದ್ಯೆ ತಪಸ್ಸು, ಇಂದ್ರಿಯನಿಗ್ರಹ, ಸತ್ಕುಲಗಳಿಂದ ನೀನು ಶೋಭಿಸುತ್ತಿರುವಿ. ನನ್ನ ತಂದೆಗೆ ಅಂಗಿರಸರು ಹೇಗೋ ಹಾಗೆ ಬೃಹಸ್ಪತಿಗಳು ನನಗೂ ಮಾನ್ಯರು. ಅವರ ಮಗನಾದ ನೀನೂ ನನಗೆ ಮಾನ್ಯನು.

ನಾನು ನಿನ್ನಲ್ಲಿ ಅನುರಕ್ತಳಾಗಿದ್ದೇನೆ. ಭಕ್ತಳಾಗಿದ್ದೇನೆ. ಮಂತ್ರ ಪುರಸ್ಸರವಾಗಿ ನನ್ನ ಪಾಣಿಗ್ರಹಣ ಮಾಡು.

ದೇವಯಾನಿ! ನಿನ್ನ ತಂದೆ ಹೇಗೆ ನನಗೆ ಪೂಜ್ಯರೋ ಹಾಗೆ ನೀನು ನನಗೆ ಪೂಜ್ಯಳು. ಶುಕ್ರಾಚಾರ್ಯರಿಗೆ ಪ್ರಾಣಕ್ಕಿಂತ ಹೆಚ್ಚು ಪ್ರಿಯಳಾದ ನೀನು ನನಗೆ ಮಾನ್ಯಳಾದ ಗುರುಪುತ್ರಿಯಾಗಿರುವಿ. ನನ್ನನ್ನು ಮದುವೆಯಾಗುವ ಬಯಕೆ ಬೇಡ.

ಕಚ! ನೀನು ಬೃಹಸ್ಪತಿಯ ಪುತ್ರ. ನನ್ನ ತಂದೆಗೆ ಪುತ್ರನಲ್ಲ. ಅಸುರರು ನಿನ್ನ ಕೊಂದಾಗಲೆಲ್ಲ ನಿನ್ನ ಮೇಲಿನ ಪ್ರೀತಿಯಿಂದ ನಾನು ನಿನ್ನನ್ನು ಬದುಕಿಸಿಕೊಂಡೆ. ಧರ್ಮಜ್ಞನೇ! ನಿರಪರಾಧಿನಿಯಾದ ನನ್ನನ್ನು ಸ್ವೀಕರಿಸು. ನಿರಾಕರಿಸದಿರು.

ದೇವಯಾನಿ! ನೀನು ವಾಸ ಮಾಡಿದ ನಿಮ್ಮ ತಂದೆಯ ಉದರದಲ್ಲಿಯೇ ನಾನೂ ವಾಸ ಮಾಡಿ ಬಂದವನು. ನೀನು ನನಗೆ ತಂಗಿಯ ಸಮಾನ. ನಾವಿಬ್ಬರು ದಂಪತಿಗಳಾಗುವುದು ತರವಲ್ಲ. ಧರ್ಮ ಅವಿರೋಧವಾಗಿ ನಾವು ವಿಶ್ವಾಸದಿಂದಿರೋಣ. ನನ್ನ ಗುರು ಭಾರ್ಗವರನ್ನು ಚೆನ್ನಾಗಿ ನೋಡಿಕೋ.

ಕಚ! ಅನುರಾಗದಿಂದ ಅಂಗಲಾಚಿ ಬೇಡಿದ ನನ್ನನ್ನೂ ಧರ್ಮದ ನೆಪ ಹೇಳಿ ತಿರಸ್ಕರಿಸುವುದಾದರೆ ನೀನು ಪಡೆದ ಸಂಜೀವಿನಿ ವಿದ್ಯೆ ನಿನಗೆ ಫಲಿಸದಿರಲಿ ಎಂದು ದೇವಯಾನಿ ಕಚನಿಗೆ ಶಾಪವಿತ್ತಳು.

ನೀ ಗುರುಪುತ್ರಿ ಎಂಬ ಕಾರಣದಿಂದ ನಾನು ನಿರಾಕರಿಸಿದ್ದೇನೆ. ನನ್ನ ನಡವಳಿಕೆ

ಧರ್ಮಸಮ್ಮತವೇ ಆಗಿದೆ. ಗುರು ಶುಕ್ರಾಚಾರ್ಯರ ಅನುಮತಿಯಿಲ್ಲದೆ ನಾನು ನಿನ್ನನ್ನು ಹೇಗೆ ಸ್ವೀಕರಿಸಲಿ. ಆದ್ದರಿಂದ ನಿನ್ನ ಶಾಪಕ್ಕೆ ನಾನು ಯೋಗ್ಯನಲ್ಲ. ಧರ್ಮ ಮಾರ್ಗದಲ್ಲಿ ನಡೆದ ನನಗೆ ನೀನು ಶಾಪವಿತ್ತ ಕಾರಣ ನಿನ್ನ ಕಾಮವನ್ನು ಯಾವ ಋಷಿಕುಮಾರನೂ ತಣಿಸದಿರಲಿ. ನಿನ್ನ ಶಾಪದಂತೆ ನನಗೆ ಮಂತ್ರ ಫಲಿಸದಿದ್ದರೂ ಚಿಂತೆಯಿಲ್ಲ. ನಾನು ಯಾರಿಗೆ ಈ ಮಂತ್ರವನ್ನು ಹೇಳಿ ಕೊಡುತ್ತೇನೆ ಅವರಿಗೆ ಸಿದ್ಧಿಸುತ್ತದೆ.

ಹೀಗೆ ಹೇಳಿ ದೇವಲೋಕಕ್ಕೆ ಕಚ ತೆರಳಿದ. ದೇವತೆಗಳು ಸಂತಸದಿಂದ ಸ್ವಾಗತಿಸಿದರು. ನಿನ್ನ ಯಶಸ್ಸು ಮುಕ್ಕಾಗದಿರಲಿ. ನೀನು ಹವಿರ್ಭಾಜನನಾಗು ಎಂದು ಹರಸಿದರು.

ಈ ಕಥೆಯಲ್ಲಿ ನಾವು ಗಮನಿಸಬೇಕಾದ ಅಂಶಗಳು ಬಹಳ ಇವೆ. ಶುಕ್ರಾಚಾರ್ಯರು ಹಾಗೂ ಬೃಹಸ್ಪತಿ ಆಚಾರ್ಯರು ಎರಡು ವಿರೋಧಿ ಗುಂಪುಗಳ ಮಾರ್ಗದರ್ಶಿ ಗುರುಗಳಾಗಿದ್ದರೂ ಪರಸ್ಪರರ ಸಾಧನೆಯ ಬಗ್ಗೆ ಗೌರವವಿರಿಸಿಕೊಂಡವರು. ಭಗವಂತನ ಆದೇಶದಂತೆ ದೈತ್ಯ ಗುರುಗಳಾದ ಶುಕ್ರಾಚಾರ್ಯರೂ ಹರಿಭಕ್ತರೇ. ಒಂದೇ ಉದ್ದೇಶದ ಒಂದೇ ಸಂಪ್ರದಾಯದ ಎರಡು ಗುಂಪುಗಳ ನಾಯಕರು ಪರಸ್ಪರ ಅಗೌರವದಿಂದ ಅಸಹಾಯದಿಂದ ಕಚ್ಚಾಡಿಕೊಳ್ಳುವುದನ್ನು ಕಾಣುತ್ತಿರುವ ಇಂದಿನ ಸಮಾಜಕ್ಕೆ ಅನುಕರಣೀಯ ಮಾದರಿ ಗುರು-ಶುಕ್ರ ಆಚಾರ್ಯರ ನಡವಳಿಕೆ.

ಶುಕ್ರಾಚಾರ್ಯರಲ್ಲಿದ್ದ ಮೃತ ಸಂಜೀವಿನೀ ವಿದ್ಯೆಯನ್ನು ಪಡೆಯಲು ಬಂದ ಕಚ ಒಂದು ಸಾವಿರ ವರ್ಷದಷ್ಟು ದೀರ್ಘಕಾಲ ತಾಳ್ಮೆಯಿಂದ ಗುರುಶುಶ್ರೂಷೆ ಮಾಡಿ ಅವರ ಮನ ಮೆಚ್ಚಿಸಿ ಸಂಜೀವಿನಿ ವಿದ್ಯೆ ಪಡೆದ. ಯಾವುದೇ ವಿದ್ಯೆಯನ್ನು ಪಡೆಯಲು ಶ್ರದ್ಧೆ, ಶ್ರಮ, ಸಹನೆ, ಛಲಗಳು ಬೇಕು. ಇಂದಿನ ವಿದ್ಯಾರ್ಥಿ ಸಮಾಜದಲ್ಲಿ ಇವೆಲ್ಲವೂ ಕಣ್ಮರೆಯಾಗುತ್ತಿದೆ. ದಿನ ಬೆಳಗಾಗುವಷ್ಟರಲ್ಲಿ ಪ್ರಸಿದ್ಧ ವ್ಯಕ್ತಿಯಾಗಬೇಕೆಂದು ಹಪಾಹಪಿತನ ತೋರುವವರೇ ಹೆಚ್ಚು. ಎಷ್ಟೇ ಶ್ರೀಮಂತನಾದರೂ ಆರೋಗ್ಯವಂತ ಮಗು ಬೇಕೆಂದರೆ ಒಂಬತ್ತು ತಿಂಗಳು ಕಾಯಲೇ ಬೇಕಲ್ಲವೇ?

ಸುಂದರ ಯುವತಿ ದೇವಯಾನಿಯೊಂದಿಗೆ ಎಷ್ಟೇ ಸರಸದ ಸಲುಗೆಯ ಒಡನಾಟವಿರಿಸಿಕೊಂಡರೂ ಸಭ್ಯತೆಯನ್ನು ಮೀರದ, ಕೊನೆಗೂ ತಂಗಿ ಎಂದು ಬಗೆದು ಶಾಪ ಪಡೆದರೂ, ಸೌಂದರ್ಯವನ್ನು ಮೆಚ್ಚಿದರೂ ಅದಕ್ಕೆ ದಾಸನಾಗದ ಕಚನ ಸಂಯಮ ಅತ್ಯಾಶ್ಚರ್ಯಕರ!

ವಿದ್ಯಾರ್ಥಿಯಾದವನಿಗೆ ಇಂದ್ರಿಯ ನಿಗ್ರಹ ಬಹಳ ಮುಖ್ಯ! ★

# ಕಠೋಪನಿಷತ್

ಡಾ। ಎನ್. ವೇಂಕಟೇಶಾಚಾರ್ಯ

**ಸ ತ್ವಂ ಪ್ರಿಯಾನ್ ಪ್ರಿಯರೂಪಾಂಶ್ಚ**
**ಕಾಮಾನಭಿಧ್ಯಾಯನ್ ನಚಿಕೇತೋಽತ್ಯಸ್ರಾಕ್ಷೀಃ ।**
**ನೈತಾಂ ಶೃಂಕಾಂ ವಿತ್ತಮಯೀಂ ಅವಾಪ್ತಃ**
**ಯಸ್ಯಾಂ ಮಜ್ಜಂತಿ ಬಹವೋ ಮನುಷ್ಯಾಃ ॥**

ಅಂತಹಾ ವಿವೇಕಿಯಾದ ನೀನು ಪ್ರಿಯರಾದ ಹೆಂಡತಿ ಮಕ್ಕಳನ್ನು ಅವರೆಲ್ಲರಿಗೂ ಬೇಕೆನಿಸುವ ಮನೆ ಮೊದಲಾದ ಕಾಮನೆಗಳನ್ನು ಅಭಿಧ್ಯಾಯನ್= ಅಸ್ಥಿರ ಎಂದು ನಿಶ್ಚಯಿಸಿ ಅವೆಲ್ಲವನ್ನೂ ಅತ್ಯಸ್ರಾಕ್ಷೀಃ= ಚೆನ್ನಾಗಿಯೇ ಬಿಟ್ಟಿರುವಿ. ಸ್ವರ್ಣಮಯವಾದ ಈ ಕುತ್ತಿಗೆಯ ಹಾರವನ್ನು ನೀನು ಬಯಸಲಿಲ್ಲ. ಅದನ್ನು ಕಂಡೇ ಬಹಳ ಮಂದಿ ಮರುಳಾಗಿ ಹಾತೊರೆಯುತ್ತಾರೆ. (ನಚಿಕೇತನೇ ನೀನು ಧೀರ)

ಮನುಷ್ಯನನ್ನು ಬಂಧಿಸುವುದು ಎರಡು. ಒಂದು ತನಗೆ ಖುಷಿಕೊಡುವುದು. ಇದು ಪ್ರಿಯ. ಇನ್ನೊಂದು ತನಗೆ ಬೇಕಾದವರಿಗೆ ಖುಷಿಕೊಡುವುದು. ಇದು ಪ್ರಿಯರೂಪ. ಅವನ ಎಲ್ಲಾ ಕೆಲಸಗಳೂ ಸಹ ತನಗಾಗಿ ಅಥವಾ ತನ್ನವರಿಗಾಗಿ ಹಾಗೆಯೇ ಅವನ ಎಲ್ಲಾ ಕಷ್ಟಗಳು ತನ್ನ ಪ್ರಿಯವಾದುದರ ಪಡೆಯಲಿಕ್ಕಾಗಿ ಅಥವಾ ಪ್ರಿಯ ಎಂದು ಭಾವಿಸಿಕೊಂಡು ಅದನ್ನು ಪಡೆಯಲಿಕ್ಕಾಗಿ.

ಆದರೆ ನಚಿಕೇತನೇ ನೀನು ಎಂತೆಂತಹವನೋ ಅಲ್ಲ. ಚಂಚಲ ಚಿತ್ತನಾದವನಲ್ಲ. **'ಸಮಾಹಿತೋ ಭೂತ್ವಾ'** ಎಂಬಂತೆ ಹಿಂದೆಯೇ ಹೊಗಳಿಸಿಕೊಂಡವನು. ಸ ತ್ವಂ ಅಂತವನು ನೀನು. ನಾನು ನಿನಗಾಗಿ ಏನೇನೋ ಕೊಟ್ಟರೂ ಮನಸ್ಸು ಅಲುಗಾಡಲಿಲ್ಲ. ಏಕೆಂದರೆ ಅಭಿಧ್ಯಾಯನ್= ಉಳಿದವುಗಳು ಅಸ್ಥಿರ ಎಂದು ನಿಶ್ಚಯಿಸಿದವನು. ಅದೆಲ್ಲವನ್ನು ಬಿಟ್ಟಿ.

ಆದರೆ ಅವೆಲ್ಲವನ್ನು ಬಿಟ್ಟದ್ದೂ ಸರಿ. ಆದರೆ ಎಲ್ಲ ಬಿಟ್ಟರೂ ಬಿಡಲಾಗದಿರುವುದು ಸುವರ್ಣ. ಅದು ಎಂತಹ ವರ್ಣಮಯ ವ್ಯಕ್ತಿಯನ್ನು ಬಂಧಿಸುವುದು ಹಾಗೆಯೇ ವಿವರ್ಣನಾದ ನಿರುತ್ಸಾಹಿಯನ್ನು ಬಡಿದೇಳಿಸುವುದು. ಆ ಚಿನ್ನ ಗಟ್ಟಿಯಾಗಿದ್ದು ಕರಗುತ್ತದೆ.

ಗಟ್ಟಿ ಮನಸ್ಸಿನವರನ್ನು ಕರಗಿಸುತ್ತದೆ. ಚಿನ್ನ ಕರಗಿ ಮತ್ತೆ ಹಿಂದಿನ ಆಭರಣ ಆಗಬಲ್ಲದು. ಚಿನ್ನದ ಬಲದಿಂದ ವಿರಕ್ತನಾದವ ಮತ್ತೆ ಸಂಸಾರಿಯಾಗಬಲ್ಲ. ಅವನ್ನು ವಿತ್ತಮಯ–ಬಹುರೂಪ ಎನ್ನುತ್ತಾರೆ. ಆ ಸುವರ್ಣದ ಹಾರ ಕೊಟ್ಟರೂ ನೀನು ಬಯಸಲಿಲ್ಲ. ಉಳಿದವರಿಗೆ ಕೊಡುವುದಿರಲಿ, ಕಂಡರೂ ಸಾಕು ಅದಕ್ಕೆ ಬಲಿಯಾಗಿ ಬಹಳ ಮಂದಿ ಮರುಳಾಗಿ ಹಾತೊರೆಯುತ್ತಾರೆ. ಚಿನ್ನದ ಸರ ಎಂದಾಗ ಒಂದು ಮಾತು. ಕೆಲವರು ಹುಡುಗಿಯನ್ನು ಸರ ಹಾಕುವುದನ್ನು ತೀರ್ಮಾನಿಸಿಕೊಂಡೇ ಒಪ್ಪಿಕೊಳ್ಳುತ್ತಾರೆ. ಜೊತೆಯಾದ ಚಿನ್ನದ ಸರ ಧರಿಸಿಕೊಂಡಿದ್ದರಿಂದಲೇ ಆಕೆ ಜೊತೆಗಾರ್ತಿ ಸಹಧರ್ಮಿಣಿ ಎನ್ನುತ್ತಾರೆ. ಇಲ್ಲ ಎಂದಾದಲ್ಲಿ ಹಸೆಮಣೆ ಏರಿದ್ದರೂ ಸರ ಬರಲಿಲ್ಲ ಎಂದು ವಾಪಸ್ಸು ಸರಿದು ಹೋಗುವ ವರಶಿಖಾಮಣಿಗಳು ಇಲ್ಲವೇ?

ಎಷ್ಟೋ ಭಾರಿ ಆ ಮೇಲೂ ಸರ ಬರಲಿಲ್ಲ ಎಂದು ಜಗಳಕ್ಕೆ ತುಪ್ಪ ಸುರಿಯುವವರೂ ಇದ್ದಾರೆ. ಸೀಮೆಎಣ್ಣೆ ಸುರಿಯುವವರೂ ಇದ್ದಾರೆ. ಮುಂದೆ ನರಕಕ್ಕೆ ಬರುವವರೂ ಇದ್ದಾರೆ.

ಅದಕ್ಕೆ ಯಮಧರ್ಮರಾಜ ಹೇಳಿದನು. 'ಯಸ್ಯಾಂ ಮಜ್ಜಂತಿ ಬಹವೋ ಮನುಷ್ಯಾಃ' ಆ ಬಂಗಾರದ ಹಾರಕ್ಕೆ ಬಹಳ ಮಂದಿ ಮರುಳಾಗುತ್ತಾರೆ. ಇನ್ನೂ ಸ್ವಾರಸ್ಯವೆಂದರೆ ಮನುಷ್ಯಾಃ=ಸ್ವಭಾವತಃ ತಿಳಿದವರೂ ಕೂಡ ಮರುಳಾಗಿ ಮುಮ್ಮಲ ಮರುಗುತ್ತಾರೆ ಎಂದಿದ್ದಾನೆ.

ಪ್ರಾಯಶಃ ಬಂಗಾರದ ಸರಕ್ಕಾಗಿ–ಸಂಪತ್ತಿಗಾಗಿ ಬೇರೆಯವರ ಬದುಕನ್ನು ನರಕಮಾಡಿ–ತಮ್ಮ ಬದುಕನ್ನು ನರಕಮಾಡಿಕೊಂಡು ಕೊನೆಗೆ ಯಮನ ಲೋಕವಾದ ನರಕಕ್ಕೆ ಭೇಟಿಮಾಡಿದವರ ಚರಿತ್ರೆ ಯಮನಿಗೆ ದಿನನಿತ್ಯದ ಅನುಭವ.

ಹೀಗಾಗಿ ನೀನು ಮರುಳಾಗಲಿಲ್ಲ ಎಂದರೆ ನಚಿಕೇತ ನೀನು ದಿಟ್ಟ ಬಾಲಕ–ಭೇಷ್ ಎಂಬ ಭಾವ ಇಲ್ಲಿದೆ.

ಕಾಂಚನಕ್ಕಾಗಿ ಕುರುಡಾಗುವವರು ಬಹಳ. ಒಳಗಣ್ಣು ತೆರೆಯುವವರು ಭಾರೀ ವಿರಳ. ಚಿನ್ನದ ಉಂಗುರು–ಚಿನ್ನದ ಬಳೆಗಳಿಗಾಗಿಯೆ ಮರುಳಾಗುವವರು ಇದ್ದಾರೆ. ಇನ್ನು ಕುತ್ತಿಗೆಯ ಹಾರಕ್ಕೆ ಬಾಗದಿರುವವರು ಯಾರು? ಚಿನ್ನದ ಸರ ಕುತ್ತಿಗೆಯಲ್ಲಿ ನೇತಾಡುವುದು ಒಳಗಿನ ಮನದಲ್ಲಿ ಜೋತಾಡುತ್ತಿರುವ ಭೌತಿಕ ವ್ಯಾಮೋಹದ ಸಂಕೇತವಲ್ಲವೆ ?

**(ಸಶೇಷ)**

ಸ್ತೋತ್ರ ಚಿಂತನೆ

ಭಾಗ–15

# ಶ್ರೀನಾರಾಯಣವರ್ಮ

–ಬೆ.ನಾ ವಿಜಯೀಂದ್ರಾಚಾರ್ಯ, ಮೈಸೂರು

**'ನರಸಿಂಹೋಽಖಿಲಾಜ್ಞಾನಮತಧ್ವಾಂತ ದಿವಾಕರಃ'**

'ಅಖಿಲ ಅಜ್ಞಾನಮತಗಳೆಂಬ ಕಗ್ಗತ್ತಲಿಗೆ ನರಸಿಂಹನು ಕೆಂಗದಿರನಂತಿರುವನು' ಸಿಂಹದ ಆಗಮನ ಅಥವಾ ಗರ್ಜನೆಗೆ ಅರಣ್ಯದ ಸಕಲ ಗೋಮಾಯುಗಳು ಹೆದರಿ ಓಡುವಂತೆ; ಮೋಸದ ಮೋಕ್ಷಸ್ವರೂಪವನ್ನು ಬೋಧಿಸುವ ಅಜ್ಞಾನಿಗಳೆಂಬ ಗೋಮಾಯುಗಳು ನರಸಿಂಹನ ಅಟ್ಟಹಾಸಕ್ಕೆ ಬೆಚ್ಚಿಬೀಳುವವು. ಆದ್ದರಿಂದ ನರಸಿಂಹನಲ್ಲಿ ನಮ್ಮ ಪ್ರಾರ್ಥನೆ ಹೀಗಿರಬೇಕೆನ್ನುತ್ತಾರೆ ರಾಜರು–

**ನಮಸ್ತೇ ನರಸಿಂಹಾಯ ಸಮಸ್ತಖಲವೈರಿಣೇ ।**
**ಪ್ರಮಾಸ್ತು ಮೇ ಭ್ರಮೋ ಮಾಸ್ತು ಶಮೋಸ್ತು ಮಮ ವೈರಿಣಾಮ್॥**

ಅರಿಷಡ್ವರ್ಗಕ್ಕೆ ರಿಪು ಎನಿಸಿದ ನೃಹರಿಯೇ! ನಿನಗೆ ನಮನ. ಬೇಡ ಎನಗೆ ಭ್ರಮ, ನೀಡು ಎನಗೆ ಪ್ರಮಾ, ತೀಡು ಎನ್ನ ರಿಪುಗಳ ಅಸಮ! ಎಂದು.

ಅಂದಹಾಗೆ ಈ ಅಜ್ಞಾನಕ್ಕೆ ಕಾರಣ ನಮ್ಮ ಪಾಪಪರ್ವತಗಳು. ಮಾಡಿದ ಪಾಪ ಅಜ್ಞಾನ ಕೂಪದಲ್ಲಿ ಬೀಳಿಸುತ್ತದೆ. ದುರಿತದಾಟದೆ ಅಜ್ಞಾನ ದೂರವಾಗದು. ದುರಿತವನ್ನು ತರಿಯುವನೊಬ್ಬನೇ ನರಹರಿಮಾತ್ರ. ಆದ್ದರಿಂದ ನರಹರಿಯು ಅಜ್ಞಾನಹರಣದೇವತೆ ಎನಿಸಿದ್ದಾನೆ. ಈ ಅನುಸಂಧಾನದಿಂದ ನರಸಿಂಹನನ್ನು ಜಪಿಸಿದಲ್ಲಿ ಒಡನೆ ದಡ ದಾಟಿಸುವನೆನ್ನುತ್ತಾರೆ ದಾಸರು–

**'ನರಸಿಂಹಮಂತ್ರ ಒಂದಿರಲು ಸಾಕು**
**ದುರಿತಕೋಟಿಯತರಿದು ಭಾಗ್ಯವನು ಕೊಡುವ'** ಎಂದು.

ಚಿತ್ತೇಶ–ವಿತ್ತೇಶ–ತತ್ವೇಶರೆಲ್ಲರೂ ತಮ್ಮ ಅಜ್ಞಾನ ಹರಣಕ್ಕಾಗಿ ನಂಬಿದ ದೇವರು ನರಹರಿಯೇ ಆಗಿದ್ದಾನೆ. ಈಶಾನ ದಿಕ್ಕಿನ ಅಧಿಪತಿಯಾದ ಜ್ಞಾನದೇವತೆ ಎನಿಸಿದೆ ಆ ಮಹರುದ್ರನೂ ತನ್ನ ತಿಳಿವಿಗಾಗಿ ನರಸಿಂಹನನ್ನೇ ಉಪಾಸನೆಮಾಮಾಡುತ್ತಿದ್ದಾನೆ. **'ಕ್ವಾಸೌ ಮದನ್ಯೋ ಜಗದೀಶ್ವರೋ ಹರಿಃ'** ಎಂದು ಗುಡುಗಿದ ಹಿರಣ್ಯಕನ ಅಜ್ಞಾನ ಪರ್ವತವನ್ನು ಖಂಡಿಸಲು ಬಾಲಕನಾದ ಪ್ರಹ್ಲಾದ ನರಸಿಂಹನನ್ನೇ ಆಶ್ರಯಿಸಿದ. ಜಗತ್ತಿನ ಸಕಲ ಧೀಮಂತರೂ ವಾದಿನಿಗ್ರಹದ ಸಮಯದಲ್ಲಿ ನೆನೆಯುವ ದೇವತೆ ನರಸಿಂಹನೇ ಆಗಿದ್ದಾನೆ.

ಜ್ಞಾನದಾತನಾದ ರುದ್ರನಿಗೆ ಮೂರುಕಣ್ಣುಗಳು ಎಂದು ನಮಗೆ ತಿಳಿದಿದೆ. ಅದರಂತೆ ಅವನ ಅಂತರ್ಯಾಮಿಯಾದ ಪ್ರಾಣಸ್ಥ ನರಸಿಂಹನಿಗೂ ಮೂರುಕಣ್ಣು. ರುದ್ರನ ಮೂರನೇ ಕಣ್ಣು ಕಾಮನನ್ನು ಭಸ್ಮಮಾಡಿದಂತೆ  ನರಸಿಂಹನ ಮೂರುಕಣ್ಣು ಕಾಮಾದಿ ಆರು ರಿಪುಗಳನ್ನು ಸುಡಬಲ್ಲದು. ಕಾಮಾದಿ ರಿಪುಗಳೇ ಜ್ಞಾನಕ್ಕೆ ಪ್ರತಿಬಂಧಕರಾಗಿದ್ದಾರೆ. ಅವರನ್ನು ದಹಿಸಿದರೆ ಜ್ಞಾನಪ್ರತಿಬಂಧಕವು ನಾಶವಾದಂತೆಯೇ. ಹೀಗೆ ನರಸಿಂಹನ ಉಪಕಾರವನ್ನು ಸ್ಮರಿಸಿಕೊಳ್ಳಬೇಕು.

ಜ್ಞಾನಮಾರ್ಗದಲ್ಲಿ ನರಸಿಂಹನದಯೆ ಅವಶ್ಯಕವಾದಂತೆ ಸಂಸಾರಾರಣ್ಯದಲ್ಲಿಯೂ ನರಸಿಂಹನ ದಯೆ ಬೇಕೇ ಬೇಕು. ಇದಕ್ಕೆ ಪ್ರಹ್ಲಾದರಾಜರ ಮಾತೇ ಸಾಕ್ಷಿಯಾಗಿದೆ.

ನರಸಿಂಹದೇವರ ಬಳಿ ಕೈಮುಗಿದು ಪ್ರಾರ್ಥಿಸುತ್ತಿರುವ ಪ್ರಹ್ಲಾದ ಸಲಿಗೆಯಿಂದ ಹೇಳುತ್ತಾನೆ–

**ನಾಹಂ ಬಿಭೇಮ್ಯಜಿತ ತೇಽತಿಭಯಾನಕಸ್ಯ**
**ಜಿಹ್ವಾಗ್ನಿನೇತ್ರಭ್ರುಕುಟೀರಭಸೋಗ್ರದಂಷ್ಟ್ರಾತ್ ।**
**ಅಂತಃಸ್ರಜಃಕ್ಷತಜಕೇಸರಶಂಕುಕರ್ಣಾ–**
**ನ್ನಿರ್ಹ್ರಾದಭೀತದಿಗಿಭಾದರಿಭಿನ್ನಖಾಗ್ರಾತ್** ॥ (ಭಾ. 7–9–15)

ನರಸಿಂಹನೇ! ಈ ನಿನ್ನ ಭಯಂಕರ ರೂಪವನ್ನು ಕಂಡು ಎಲ್ಲಾ ಲೋಕಗಳೂ ತತ್ತರಿಸಿ ಹೋಗುತ್ತಿವೆ. ಎಲ್ಲರೂ ಭಯಗ್ರಸ್ತರಾಗಿದ್ದಾರೆ. ಆದರೆ ನನಗೆ ನಿನ್ನಿಂದ ಸ್ವಲ್ಪವೂ ಹೆದರಿಕೆಯಾಗುತ್ತಿಲ್ಲ. ನಿನ್ನ ಮುಖವಾದರೂ ಅತಿಭಯಂಕರವಾಗಿದೆ. ನಿನ್ನ ವಕ್ರವಾದ ಕಣ್ಗಳಾದರೋ ಬೆಂಕಿಯ ಮಳೆಯನ್ನೇ ಸುರಿಸುತ್ತಿವೆ. ವಿಲಾಸದ ಹುಬ್ಬುಗಳು ಗಂಟಿಕ್ಕಿದ್ದರಿಂದ ಭಯಾನಕವಾಗಿವೆ. ಕ್ರೂರವಾದ ಕೋರೆಹಲ್ಲುಗಳು ಮತ್ತಷ್ಟು ಭಯಪಡಿ ಸುವಂತೆ ಕಾಣುತ್ತಿವೆ. ಕೂರುಗುರುಗಳಿಂದ ದೈತ್ಯೇಂದ್ರನ ಉದರವನ್ನು ಸೀಳಿ ಕರುಳನ್ನು ಮಾಲೆಮಾಡಿ ಕೊರಳಿಗೆ ಧರಿಸಿದ ಆ ನಿನ್ನ ರೂಪ ನೋಡುವವರಾರು? ಉದರ ಸೀಳ್ವಾಗ ಸಿಡಿದೆದ್ದ ನೆತ್ತರಿನಿಂದ ಕೇಸರವೆಲ್ಲವೂ ರಕ್ತಸಿಕ್ತವಾಗಿದೆ. ಮೀಟುವ ಗೂಟದಂತೆ ನಿನ್ನ ಕಿವಿಗಳಿವೆ. ಮೊದಲೇ ನಿನ್ನ ಭಯಾನಕ ರೂಪದಿಂದಲೇ ನಡುಗಿದ್ದೆ. ನಿನ್ನ ಗರ್ಜನೆಯಿಂದ ಮತ್ತಷ್ಟೂ ಭಯವಾಗಿದೆ. ನಿನ್ನ ಮೋರೆಯಿಂದ ಹೊರಬಂದ ಗರ್ಜನೆ ಅಷ್ಟದಿಗ್ಗಜಗಳನ್ನೂ ನಡುಗಿಸುವಂತಾಗಿದೆ. ಅರಿಯನ್ನು ಸೀಳಿದ ಉಗುರುಗಳು ಭಯಂಕರವಾಗಿವೆ. ಇಂತಹ ನಿನ್ನ ರೂಪವನ್ನು ಕಂಡರೂ ನನಗೇನು ಭಯ ಉಂಟಾಗುವುದಿಲ್ಲ. ಹಾಗಿದ್ದರೂ ನಾನು ಭಯಪಟ್ಟಿದ್ದೇನೆ. ನನ್ನ ಭಯ ನಿನ್ನ ರೂಪ ಕಂಡಲ್ಲ. ಭಗವಂತನೇ! ನನ್ನ ಭಯಕ್ಕೆ ಕಾರಣವೇನೆಂದೆಯಾ?! ಕೇಳು! ಎಂದು ಪ್ರಹ್ಲಾದ ವಿವರಿಸುತ್ತಾನೆ–

**(ಸಶೇಷ)**

ಭಾಗ–15

# ಜೀವನಯಜ್ಞ

## ದೇಹಗತ ವೈಶ್ವಾನರನಿಗೆ ಆಹುತಿ ಪ್ರದಾನ

ಸಂಕಲನ: ಸುನಂದಕೀ

ಮಾನವನ ದೇಹದಲ್ಲಿ ಪಂಚಾಗ್ನಿಗಳು ಇರುವುವು. ಬಾಯಿಯಲ್ಲಿ–ಆಹವನೀಯಾಗ್ನಿ, ಹೃದಯದಲ್ಲಿ ಗಾರ್ಹಪತ್ಯ ನಾಭಿಯಲ್ಲಿ–ದಕ್ಷಿಣಾಗ್ನಿ, ನಾಭಿಯ ಬಲಭಾಗದಲ್ಲಿ–ಶರಭಿ ಅಗ್ನಿ, ನಾಭಿಯ ಎಡಭಾಗದಲ್ಲಿ–ಅವಶರಭಿ ಅಗ್ನಿಗಳು ಎಂದು.

ಈ ಪಂಚಾಗ್ನಿಗಳಿಗೆ ನಿಯಾಮಕನಾದ ವೈಶ್ವಾನರನಾಮಕ ಪರಮಾತ್ಮನು ದೇಹಾಕಾರನಾಗಿ ದೇಹವನ್ನು ಪೂರ್ಣನಾಗಿ ವ್ಯಾಪಿಸಿರುವನು. ಬಾಯಿಯಲ್ಲಿರುವ ಆಹವನೀಯಾಗ್ನಿಗಾಗಿ ಪೂರ್ವದಿಕ್ಕಿನಲ್ಲಿರುವ ಸ್ವಲ್ಪ ಅನ್ನವನ್ನು ತುಳಸೀದಳ ಸಹಿತವಾಗಿ ಅಂಗುಷ್ಠ–ತರ್ಜನೀ–ಮಧ್ಯಮ ಬೆರಳುಗಳಿಂದ ತೆಗೆದುಕೊಂಡು **'ದ್ಯುನಾಮಕ ಭಾರತೀಪತಿ ಪ್ರಾಣಾಂತರ್ಗತ ಶಾಂತೀಪತಿ ಅನಿರುದ್ಧಾಭಿನ್ನ ಪ್ರಾಣನಾಮಕ ವೈಶ್ವಾನರಾಯ ನಮಃ'** ಎಂದು ಧ್ಯಾನಿಸುತ್ತಾ 'ಪ್ರಾಣಾಯ ಸ್ವಾಹಾ' ಎಂದು ಹೇಳುತ್ತಾ ಬಾಯಿಯಲ್ಲಿ ಅನ್ನವನ್ನು ಹೋಮಿಸಬೇಕು.

ಹೃದಯದಲ್ಲಿರುವ ಗಾರ್ಹಪತ್ಯ ಅಗ್ನಿಗಾಗಿ ದಕ್ಷಿಣದಿಕ್ಕಿನಲ್ಲಿರುವ ಸ್ವಲ್ಪ ಅನ್ನವನ್ನು ತುಳಸೀದಳ ಸಹಿತವಾಗಿ ಅಂಗುಷ್ಠ–ಮಧ್ಯಮ–ಅನಾಮಿಕ ಬೆರಳುಗಳಿಂದ ತೆಗೆದುಕೊಂಡು **'ಪೃಥ್ವೀನಾಮಕ ಭಾರತೀಪತಿ ಅಪಾನಾಂತರ್ಗತ ಕೃತಿಪತಿ ಪ್ರದ್ಯುಮ್ನಾಭಿನ್ನ ಅಪಾನನಾಮಕ ವೈಶ್ವಾನರಾಯ ನಮಃ'** ಎಂದು ಧ್ಯಾನಿಸುತ್ತಾ 'ಅಪಾನಾಯ ಸ್ವಾಹಾ' ಎಂದು ಹೇಳುತ್ತಾ ಬಾಯಿಯಲ್ಲಿ ಅನ್ನವನ್ನು ಹೋಮಿಸಬೇಕು.

ನಾಭಿಯಲ್ಲಿರುವ ದಕ್ಷಿಣಾಗ್ನಿಗಾಗಿ ಪಶ್ಚಿಮ ದಿಕ್ಕಿನಲ್ಲಿರುವ ಸ್ವಲ್ಪ ಅನ್ನವನ್ನು ತುಲಸೀದಳ ಸಹಿತನಾಗಿ ಅಂಗುಷ್ಠ–ಅನಾಮಿಕಾ–ಕನಿಷ್ಠಿಕಾ ಬೆರಳುಗಳಿಂದ ತೆಗೆದುಕೊಂಡು 'ದಿಙ್ನಾಮಕ ಭಾರತೀಪತಿ ವ್ಯಾನಾಂತರ್ಗತ ಜಯಾಪತಿ ಸಂಕರ್ಷಣಾಭಿನ್ನ ವ್ಯಾನನಾಮಕ ವೈಶ್ವಾನರಾಯ ನಮಃ' ಎಂದು ಧ್ಯಾನಿಸುತ್ತಾ 'ವ್ಯಾನಾಯಸ್ವಾಹಾ' ಎಂದು ಹೇಳುತ್ತಾ ಬಾಯಿಯಲ್ಲಿ ಅನ್ನವನ್ನು ಹೋಮಿಸಬೇಕು.

ನಾಭಿಯ ಬಲಭಾಗದಲ್ಲಿರುವ ಶರಭಿ ಅಗ್ನಿಗಾಗಿ ಉತ್ತರದಿಕ್ಕಿನಲ್ಲಿರುವ ಸ್ವಲ್ಪ ಅನ್ನವನ್ನು ತುಳಸೀದಳ ಸಹಿತವಾಗಿ ಅಂಗುಷ್ಠ–ತರ್ಜನೀ ಕನಿಷ್ಠಿಕಾ ಬೆರಳುಗಳಿಂದ ತೆಗೆದುಕೊಂಡು

**‘ವಾಙ್‌ನಾಮಕ ಭಾರತೀಪತಿ ಉದಾನಾಂತರ್ಗತ ಮಾಯಾಪತಿ ವಾಸುದೇವಾಭಿನ್ನ ಉದಾನನಾಮಕ ವೈಶ್ವಾನರಾಯ ನಮಃ’** ಎಂದು ಧ್ಯಾನಿಸುತ್ತಾ ‘ಉದಾನಾಯಸ್ವಾಹಾ’ ಎಂದು ಹೇಳುತ್ತಾ ಬಾಯಿಯಲ್ಲಿ ಅನ್ನವನ್ನು ಹೋಮಿಸಬೇಕು.

ನಾಭಿಯ ಎಡಭಾಗದಲ್ಲಿರುವ ಅವಶರಭಿ ಅಗ್ನಿಗಾಗಿ ಮಧ್ಯದಲ್ಲಿರುವ ಸ್ವಲ್ಪ ಅನ್ನವನ್ನು ತುಲಸೀದಲ ಸಹಿತವಾಗಿ ಐದು ಬೆರಳುಗಳಿಂದ ತೆಗೆದುಕೊಂಡು ‘ವಿದ್ಯುನ್ನಾಮಕ ಭಾರತೀಪತಿ ಸಮಾನಾಂತರ್ಗತ ಲಕ್ಷ್ಮೀಪತಿ ನಾರಾಯಣಾಭಿನ್ನ ಸಮಾನನಾಮಕ ವೈಶ್ವಾನರಾಯ ನಮಃ ಎಂದು ಧ್ಯಾನಿಸುತ್ತಾ ‘ಸಮಾನಾಯ ಸ್ವಾಹಾ’ ಎಂದು ಹೇಳುತ್ತಾ ಬಾಯಿಯಲ್ಲಿ ಅನ್ನವನ್ನು ಹೋಮಿಸಬೇಕು.

ಈ ಐದು ಅಗ್ನಿಗಳಲ್ಲದೆ ಜಠರದಲ್ಲಿರುವ ಜಠರಾಗ್ನಿಗೆ ಮತ್ತೊಮ್ಮೆ ಮಧ್ಯದಲ್ಲಿರುವ ಅನ್ನವನ್ನು ಐದು ಬೆರಳುಗಳಿಂದ ತೆಗೆದುಕೊಂಡು ‘ಭಾರತೀಪತಿ ಮುಖ್ಯಪ್ರಾಣಾಂತರ್ಗತ ಬ್ರಹ್ಮಾಭಿನ್ನ ವೈಶ್ವಾನರಾಯ ನಮಃ’ ಎಂದು ಅನ್ನವನ್ನು ಹೋಮಿಸಬೇಕು.

ನಂತರ ಕೇಶವಾದಿ ಇಪ್ಪತ್ತಾನ್ಲಲ್ಕು ರೂಪಗಳನ್ನು, ವಿಶ್ವ, ತೈಜಸ, ಪ್ರಾಜ್ಞ, ತುರೀಯ, ಆತ್ಮ, ಅಂತರಾತ್ಮ, ಪರಮಾತ್ಮ, ಜ್ಞಾನಾತ್ಮ ಎಂಬ ಎಂಟುರೂಪಗಳನ್ನು ಹೀಗೆ ಒಟ್ಟು ಮೂವತ್ತೆರಡು ಭಗವದ್ರೂಪಗಳನ್ನು ಸ್ಮರಿಸುತ್ತಾ ಮೂವತ್ತೆರಡು ತುತ್ತುಗಳಿಂದ ಭೋಜನವನ್ನು ಮಾಡಬೇಕು.

## ಆಹಾರ ಪದಾರ್ಥಗಳನ್ನು ಭುಂಜಿಸುವಾಗ ಸ್ಮರಣೀಯ ಭಗವದ್ರೂಪಗಳು

ಪರಮಾನ್ನವನ್ನು ಸವಿಯುವಾಗ ಕೃತಿಪತಿ ಪ್ರದ್ಯುಮ್ನನನ್ನು, ಅನ್ನವನ್ನು ತಿನ್ನುವಾಗ ಮಾಯಾಪತಿ ವಾಸುದೇವನನ್ನು ಕಾಯಿಪಲ್ಯೆಗಳನ್ನು ತಿನ್ನುವಾಗ ವಾಮನ–ಧನ್ವಂತರಿ ರೂಪಗಳನ್ನು, ತೊವ್ವೆ, ಹುಳಿಗಳನ್ನು ಸ್ವೀಕರಿಸುವಾಗ ಗರುಡಾರೂಢ ನಾರಾಯಣನನ್ನು, ಭಕ್ಷ್ಯಗಳನ್ನು ಭೋಕ್ಷಿಸುವಾಗ ಜಯಾಪತಿ ಸಂಕರ್ಷಣ–ಅಚ್ಯುತರನ್ನು, ಬೆಣ್ಣೆ–ತುಪ್ಪಗಳನ್ನು ಸವಿಯುವಾಗ ಶಾಂತಿಪತಿ ಅನಿರುದ್ಧ–ಪಾಂಡವಕೃಷ್ಣರನ್ನು, ಎಣ್ಣೆಯಲ್ಲಿ ಕರಿದ ಪದಾರ್ಥಗಳನ್ನು ತಿನ್ನುವಾಗ–ವೈಕುಂಠಪತಿ ವೇಂಕಟೇಶ್ವರನನ್ನು, ಮೊಸರನ್ನವನ್ನು ಹೀರುವಾಗ ಶ್ರೀನಿವಾಸನನ್ನು, ಹಣ್ಣುಗಳನ್ನು ತಿನ್ನುವಾಗ ಬಾಲಕೃಷ್ಣನನ್ನು, ನೀರನ್ನು ಕುಡಿಯುವಾಗ ವಿಷ್ಣುವನ್ನು ಸ್ಮರಿಸಬೇಕು. ಅಲ್ಲದೆ ತುತ್ತು–ತುತ್ತಿಗೂ ಗೋವಿಂದಾ ಗೋವಿಂದಾ ಎಂದು ಸ್ಮರಿಸಬೇಕು.

ಭೋಜನದ ಬಳಿಕ ವಾಯ್ವಂತರ್ಗತ ಇಂದಿರಾಪತಿ ಮುಕುಂದನನ್ನು ಸ್ಮರಿಸುತ್ತಾ ‘ಉತ್ತರಾಪೋಶನ’ವನ್ನು ಸ್ವೀಕರಿಸಬೇಕು.

ಈ ಸಂದರ್ಭದಲ್ಲಿ ಆಪೋಶನದ ನೀರನ್ನು ಪೂರ್ಣವಾಗಿ ಕುಡಿಯದೆ ಅರ್ಧನೀರನ್ನು ಮಾತ್ರ ತೆಗೆದುಕೊಂಡು (ಅಧಿಕಾರಿಗಳು) ಉಳಿದರ್ಧ ನೀರನ್ನು ಅಂಗುಷ್ಠ-ತರ್ಜನೀ ಬೆರಳುಗಳ ಮಧ್ಯದಿಂದ ಎಲೆಯ ಎಡಭಾಗದಲ್ಲಿ ಇಟ್ಟ ಅನ್ನದ ಮೇಲೆ ಬಿಡಬೇಕು. ಇದರಿಂದ ವಸು-ರುದ್ರ-ಆದಿತ್ಯಾಂತರ್ಗತನಾದ ಷಣ್ಣವತಿನಾಮಕ ಪರಮಾತ್ಮನು ರೌರವಾದಿನರಕಗಳಲ್ಲಿರುವ ವಂಶಜರಿಗೆ ತೃಪ್ತಿಯನ್ನು ಕೊಡುವನು.

ಇಂತಹ ಪರಮಪವಿತ್ರವಾದ ವೈಶ್ವಾನರ ಯಜ್ಞದ ಸಮಾಪ್ತಿಯಾದ ನಂತರ ಕೈಕಾಲುಗಳನ್ನು ತೊಳೆದುಕೊಂಡು ಆಚಮನವನ್ನು ಮಾಡಬೇಕು.

ನಂತರ ತೀರ್ಥವನ್ನು ತೆಗೆದುಕೊಂಡು ಮೂರು ತುಳಸೀದಳಗಳನ್ನು ತಿನ್ನಬೇಕು.

ಕೊನೆಯಲ್ಲಿ ದ್ರವರೂಪಿ ಶ್ರೀಹರಿಯನ್ನು ಸ್ಮರಿಸುತ್ತಾ ಬಲಹೆಬ್ಬೆರಳಿನಿಂದ ಎರಡು ಕಣ್ಣುಗಳಿಗೆ ನೀರನ್ನು ಒರಸಿಕೊಳ್ಳಬೇಕು. ಇದರಿಂದ ಸಚ್ಛಾಸ್ತ್ರಾಧ್ಯಯನಕ್ಕೆ ವಿಘ್ನವಾಗಿರುವ ನಿದ್ರೆಯನ್ನು ಉಂಟು ಮಾಡುವ 'ನಿಮೀಲಿ' ಎಂಬ ದೈತ್ಯನು ಸಂಹೃತನಾಗುವನು.

ಇದು ಭೋಜನ. ಇದು ಯಜನ. ಇದು ಮನೋಬುದ್ಧಿಗಳ ನಿರ್ಮಲತೆಗೆ ನಿಜ ಸಾಧನ.

ಈ ಪತಿಯಲರಿತುಂಬನರ ನಿ-
ತ್ಯೋಪವಾಸಿ ನಿರಾಮಯನು ನಿ-
ಷ್ಪಾಪಿ ನಿತ್ಯ ಮಹತ್ಸುಯಜ್ಞಗಳಾಚರಿಸಿದವನು

**(ಸಶೇಷ)**

---

(2ನೇ ಪುಟದಿಂದ...)

ಅನುಭವಿಸುತ್ತಾ ಕೊನೆಗೆ ಅಧೋಗತಿಗೆ ಇಳಿದು ದುಃಖವನ್ನು ಅನುಭವಿಸುತ್ತಾರೆ. ಇದು ಶಾಸ್ತ್ರಸಿದ್ಧ ಸಮಾಧಾನ. ಶ್ರೀಕೃಷ್ಣನ ಈ ರೀತಿಯಾದ ಉಪದೇಶದಿಂದ ಯಾವ ರೀತಿಯ ಪ್ರಶ್ನೆಗೂ ಅವಕಾಶವಿರಲಾರದು.

ಶ್ರೀಕೃಷ್ಣನಿಂದ ವಿಸ್ತೃತವಾದ ಈ ಉಪದೇಶವನ್ನು ಕೇಳಿದ ಅರ್ಜುನನು ಭಗವಂತನನ್ನು ಈ ರೀತಿಯಾಗಿ ಪ್ರಾರ್ಥಿಸುತ್ತಾನೆ. ಈ ಜೀವನು ಅನಾದಿನಿತ್ಯ ಎಂಬುದಕ್ಕೆ ಬೇರೆ ಬೇರೆ ದೃಷ್ಟಾಂತಗಳಿವೆ. ಹಿಂದೆ ಹೇಳಿದ ಪರಬ್ರಹ್ಮ-ಪ್ರಕೃತಿ ಮುಂತಾದ ದೃಷ್ಟಾಂತಗಳು ನಮಗೆ ತಿಳಿಯದ ದೃಷ್ಟಾಂತವಾಯಿತು. ಲೋಕ ಪ್ರಸಿದ್ಧವಾದ ದೃಷ್ಟಾಂತವನ್ನು ತಿಳಿಯಲು ಅಪೇಕ್ಷಿಸುತ್ತೇನೆ. ಎಂಬ ತನ್ನ ಪ್ರಶ್ನೆಯನ್ನು ಇಡಲು ಭಗವಂತನು ನಸುನಗುತ್ತಾ ತನ್ನ ಉಪದೇಶಾಮೃತವನ್ನು ಮುಂದುವರಿಸಿದನು. ★

ಪುರಾಣಸಂದೇಶ

# ಮಾರ್ಕಂಡೇಯಪುರಾಣ

ವಿ॥ ಅಡ್ವೇಲಕ್ಷ್ಮೀಶಾಚಾರ್ಯ

**ಮುಚ್ಯತಾಂ ತೇನ ನರಕಾತ್ ಪಾಪಿನೋ ಯಮ ಯಾತನಾಗತಾಃ ।**

ಎಂದಾಗ ಸಂತುಷ್ಟನಾದ ಇಂದ್ರನೆಂದ–ಈ ನಿನ್ನ ಧೋರಣೆ, ನಿನ್ನ ಕೀರ್ತಿಕಿರೀಟದ ಮುಕುಟ ಮಣಿ. ನಿನ್ನ ಇಚ್ಛೆಯಂತೆ ಆಗಲಿ ಎಂದು ನಮ್ಮನ್ನೆಲ್ಲಾ ನರಕ ದರ್ಶನದಿಂದ ಬಿಡುಗಡೆಗೊಳಿಸಿದರು. ಅಪ್ಪ! ಈ ಜನ್ಮಾಂತರಗಳ ಸ್ಮರಣೆ ನಿನಗೆ ಹೇಗುಂಟಾಯಿತೆಂದು ಕೇಳಬಹುದು. **'ಜ್ಞಾನದಾನಫಲಂಹ್ಯೇತತ್ ಜಾತಿ ಸ್ಮರಣಂ ಮಮ'** ತಿಳಿಯಿತೇ? ಎಂದು ಸುಮ್ಮನಾದ. ತಂದೆ ದಿಗ್ಭ್ರಾಂತನಾಗಿ **'ಕಿಂ ಮಯಾ ವದ ಕರ್ತವ್ಯಂ ಏವಂ ಅಸ್ಮಿನ್ ವ್ಯವಸ್ಥಿತೇ'** ಹೀಗೆಂದು ಕೇಳತಕ್ಕ ತಂದೆಯನ್ನು ಕುರಿತು ಸುಮತಿಯೆಂದ. ಬಾಳು ಬೆಳಗಬೇಕಾದರೆ ಗೋಳು ಹೊಯ್ಯುವ ಸಂಸಾರದಲ್ಲಿ ನಿರ್ಲಿಪ್ತನಾಗು. ಕಾಮ್ಯಕರ್ಮಗಳನ್ನು ತೊರೆದು ಸನ್ಯಾಸಿಯಾಗಿ ಬಗೆಯಲ್ಲಿ ಭಗವಂತನನ್ನು ಹೊತ್ತು ತಿರುಗು. 'ವಿಷಯ ಭೋಗವನ್ನು ತೊರೆದು, ತ್ಯಾಗದಿಂದ ಭಗವದ್ಯೋಗವನ್ನು ಪಡೆವ, ಯೋಗವನ್ನು ನನಗೆ ಉಪದೇಶಿಸಬೇಕೆಂದು ತಂದೆ ಮಗನಲ್ಲಿ ಕೇಳಿಕೊಂಡ. ಹಿಂದೆ ಭಗವಂತನೇ ದತ್ತಾತ್ರೇಯ ರೂಪದಿಂದ ಅಲರ್ಕನಿಗರುಹಿದ ಯೋಗಶಾಸ್ತ್ರವನ್ನು ಕೇಳು! ಎಂದು ಮಗನಾಡಿದಾಗ ತಂದೆ, ಪುಣ್ಯಪ್ರದವಾದ ದತ್ತಾತ್ರೇಯ ಅಲರ್ಕರ ಬಗ್ಗೆ ತಿಳಿಹೇಳಬೇಕೆಂದು ಕೇಳಿಕೊಂಡ.

## ಪಾತಿವ್ರತ್ಯದ ಮಹಿಮೆಗೆ ದೇವನೊಲಿದು ಬಂದ

ಪ್ರತಿಷ್ಠಾನಪುರದಲ್ಲಿ ಒಬ್ಬ ಬ್ರಾಹ್ಮಣ. ಕೌಶಿಕ ಗೋತ್ರದವ. ಕುಷ್ಠರೋಗಿಯಾಗಿದ್ದ ಆತ ಮಹಾ ಮುಂಗೋಪಿ. ಅವನ ಮಡದಿ ಸುಮತಿ. ಮಹಾಸಾಧ್ವಿ. ಮಹಾಪತಿವ್ರತೆ. ತನ್ನ ಪಾಲಿನ ದೇವರೆಂಬಂತೆ ತನ್ನ ಗಂಡನ ಕುಷ್ಠದ ಹುಣ್ಣುಗಳನ್ನು ತೊಳೆದು ಶ್ರದ್ಧೆಯಿಂದ ಆರೈಕೆ ಮಾಡಿಕೊಂಡಿದ್ದಳು. ಅದೊಂದು ದಿನ ಆ ಬ್ರಾಹ್ಮಣ ತಾನು ರಾಜಬೀದಿಯಲ್ಲಿ ಕಂಡ ವೈಶ್ಯೆಯ ಸಂಗ ಬಯಸಿ, ತನ್ನನ್ನು ಅವಳ ಮನೆಗೆ ಕರೆದೊಯ್ಯಬೇಕೆಂದು ಮಡದಿಯಲ್ಲೇ ಹೇಳಿದ. ಏಳುವುದಕ್ಕೆ ಕೂಡದವ ಸುಶೀಲೆಯಾದ ಮಡದಿಯನ್ನು ಬಿಟ್ಟು ಸೂಳೆಯ ಅಂಗ ಸಂಗದ ಹುಚ್ಚು. ಸುಮತಿ ಮರುಮಾತಾಡದೇ ಗಂಡನ ಬಯಕೆಯನ್ನು ಈಡೇರಿಸುವ ಸಲುವಾಗಿ ಬೆತ್ತದ ಬುಟ್ಟಿಯಲ್ಲಿ ಕುಳ್ಳಿರಿಸಿ, ತಲೆಯ ಮೇಲೆ ಹೊತ್ತು, ರಾತ್ರಿ ಹೊರಟಳು. ದಾರಿ ಮಧ್ಯೆ ಕಳ್ಳತನದ ಅಪವಾದಕ್ಕೊಳಗಾಗಿದ್ದ ಮಾಂಡವ್ಯ ಋಷಿ ಕುಳಿತಿದ್ದ. ತಿಳಿಯದೇ

ಗಂಡನ ಕಾಲು ಆ ಋಷಿಗೆ ತಾಗಿತು. ಕೋಪಗೊಂಡ ಆತ ಶಾಪವನ್ನಿತ್ತ. 'ಅಹಂಕಾರದಿಂದ ಮುಂದುವರೆಯುತ್ತಿರುವ ನಿನ್ನ ಗಂಡ ಸೂರ್ಯ ದರ್ಶನವಾದಾಗಲೇ ಸತ್ತು ಹೋಗಲಿ' ಎಂದು. ನಿರಪರಾಧಿಯಾದ ಆಕೆಯೂ ಶಾಪವನ್ನಿತ್ತಳು. 'ನನ್ನ ಸೇವೆಯು ಪ್ರಾಮಾಣಿಕವಾಗಿದ್ದಲ್ಲಿ ಸೂರ್ಯೋದಯವೇ ಆಗದಿರಲಿ' ಎಂದು. ಜಗತ್ತಿಗೆ ಬೆಳಕಾಗಲಿಲ್ಲ. ಜನ ತತ್ತರಿಸಿದರು. ಜನಜೀವನ ಅಸ್ತವ್ಯಸ್ತವಾಯಿತು. ಕಾಲದಲ್ಲಿ ಆಗತಕ್ಕ ನಿತ್ಯ ನೈಮಿತ್ತ ಕರ್ಮಗಳು ಸ್ಥಗಿತವಾದವು. ದೇವತೆಗಳು ಗಲಿಬಿಲಿಗೊಂಡರು. ಬ್ರಹ್ಮ-ದೇವನಲ್ಲಿ ದೂರಿತ್ತರು. ಜಗತ್ತು ತಲ್ಲಣಿಸಿದೆ ಉದ್ಧರಿಸಬೇಕೆಂದರು. ಇದು ಪಾತಿವ್ರತ್ಯದ ಮಹಿಮೆ. ನಾವ್ಯಾರು ಆ ಸುಮತಿಯನ್ನು ಸಮಾಧಾನಪಡಿಸುವ ಹಾಗಿಲ್ಲ. ನೀವೆಲ್ಲ ಅತ್ರಿ ಋಷಿಗಳ ಮಡದಿ ಅನುಸೂಯೆಯಲ್ಲಿ ಬಿನ್ನವಿಸಿ. ಪರಿಹಾರ ದೊರಕೀತು ಎಂದು ಸಮಾಧಾನ ಮಾಡಿದರು ಬ್ರಹ್ಮದೇವರು. ದೇವತೆಗಳೆಲ್ಲ ಅನಸೂಯೆಯಲ್ಲಿಗೆ ಬಂದು ಲೋಕದ ಬವಣೆಯನ್ನು ನೀಗಿಸಬೇಕೆಂದು ಕೇಳಿಕೊಂಡರು. ಅವರ ವಿನಂತಿಯ ಮೇರೆಗೆ ಅನಸೂಯಾ ಸುಮತಿಯನ್ನು ಸಮಾಧಾನ ಮಾಡಿದಳು. ಸ್ತ್ರೀಗೆ ಪತಿಯೇ ಪರದೈವ. ಇದನ್ನರಿತು ಪತಿ ಶುಶ್ರೂಷೆಯಲ್ಲಿ ಧನ್ಯತೆ ಪಡೆದಿರುವೆ. ಆದರೆ ಲೋಕದಲ್ಲಿ ಕತ್ತಲು ತುಂಬಿದೆ. ನೀನು ಪ್ರಸನ್ನಳಾಗಬೇಕೆಂದಾಗ, ಸುಮತಿ ತನ್ನ ಗೋಳು ತೋಡಿಕೊಂಡಳು. ಲೋಕಕ್ಕೆ ಸೂರ್ಯೋದಯವಾಗುವುದೂ ನನ್ನ ಬಾಳು ಕತ್ತಲಾಗುವುದೂ ಒಂದೇ. ನನ್ನ ಬಾಳ ಬೆಳಕು ನನ್ನ ಪತಿ. ಸೂರ್ಯದರ್ಶನದಿಂದ ಅವರ ಅಸ್ತವಾಗುವುದು. ಅನಸೂಯೆ ಹೀಗೆ ಸಮಾಧಾನ ಮಾಡಿದಳು. ಒಂದೋ ಲೋಕಕ್ಕೆ ಬೆಳಕಾಗಬೇಕು. ಒಂದೋ ನೀನು ಸುಮಂಗಲೆಯಾಗಿರಬೇಕು. ಏಕಕಾಲದಲ್ಲಿ ಅದು ಅಸಾಧ್ಯ. ಆದರೆ ಅದಕ್ಕೊಂದು ಮಾರ್ಗ ಉಂಟು. ಸೂರ್ಯೋದಯವಾದಾಗ ಸತ್ತು ಬೀಳುವ ನಿನ್ನ ಗಂಡನನ್ನು ನಾನು ನನ್ನ ತಪಸ್ಸನ್ನು ಧಾರೆಯೆರೆದು ಬದುಕಿಸುವೆನೆಂದಾಗ ತೃಪ್ತಳಾದ ಸುಮತಿ ಸೂರ್ಯೋದಯವಾಗಲಿ ಎಂದಳು. ಸೂರ್ಯದರ್ಶನವಾಗುತ್ತಲೆ ಬ್ರಾಹ್ಮಣ ಸತ್ತುಹೋದ. ಆಗ ಅನಸೂಯೆ ತನ್ನ ಪಾತಿವ್ರತ್ಯದ ಫಲವನ್ನು ಧಾರೆಯೆರೆದು ಆ ಬ್ರಾಹ್ಮಣನನ್ನು ಬದುಕಿಸಿದಳು. **'ರೂಪತಃ ಶೀಲತಃ ಬುದ್ಧ್ಯಾ ವಾಙ್ಮಾಧುರ್ಯಾದಿ ಭಾಷಣೈಃ। ಮದ್‌ಭರ್ತೃ ಸಮಂ ನಾನ್ಯಂ ಅಪಶ್ಯಂ ಪುರುಷಂ ಕ್ವಚಿತ್, ತೇನ ಸತ್ಯೇನ ವಿಪ್ರೋಯಂ ವ್ಯಾಧಿಮುಕ್ತಃ ಪುನರ್ಯುವಾ।** ಆ ಬ್ರಾಹ್ಮಣ ಬದುಕಿದ್ದು ಮಾತ್ರವಲ್ಲ ರೋಗಮುಕ್ತನಾಗಿಯೂ, ಯುವಕನಾಗಿಯೂ ಎದ್ದು ಕುಳಿತ. ಅನಸೂಯೆಯ ಈ ಮಹಿಮೆಯನ್ನು ಕಂಡ ದೇವತೆಗಳು ಹರ್ಷಚಿತ್ತರಾಗಿ ಬೇಕಾದ ವರ ಬೇಡೆಂದರು. ತ್ರಿಮೂರ್ತಿಗಳು ತನಗೆ ಮಕ್ಕಳಾಗಬೇಕೆಂದು

(36ನೇ...... ಪುಟದಲ್ಲಿ)

ಮುಖಪುಟಲೇಖನ

# ನೇಮವೆನಗೆ ಪಾಲಿಸಯ್ಯ ಸ್ವಾಮಿ ವಾಮನ

**–ಬೊಮ್ಮಾರಬೆಟ್ಟು ಶ್ರೀನಿವಾಸ ಭಟ್ಟ**

ವಾಮನ ರೂಪವು ಕೇಶವಾದಿ ದ್ವಾದಶಮೂರ್ತಿಗಳಲ್ಲಿ ಎಂಟನೆಯದ್ದು. ಆಷಾಢಮಾಸದ ನಿಯಾಮಕನಾದ ಶ್ರೀವಾಮನರೂಪಿ ಪರಮಾತ್ಮನು ಮೇಲಿನ ಬಲಗೈಲಿ ಚಕ್ರವನ್ನು, ಎಡಗೈಲಿ ಗದೆಯನ್ನು ಕೆಳಗಿನ ಎಡಗೈಲಿ ಪದ್ಮವನ್ನು, ಬಲಗೈಲಿ ಶಂಖವನ್ನೂ ಧರಿಸಿರುವವನೆಂದು ಶ್ರೀಮಧ್ವಾಚಾರ್ಯರು ಶ್ರೀತಂತ್ರಸಾರಸಂಗ್ರಹದಲ್ಲಿ ತಿಳಿಸಿದ್ದಾರೆ.

ಬ್ರಹ್ಮಚಾರಿರೂಪದಲ್ಲಿ ಬಂದು ಬಲಿಯಲ್ಲಿ ಭೂದಾನವನ್ನು ಬೇಡಿದ ವಾಮನರೂಪವೇ ಬೇರೆ ಈ ದ್ವಾದಶಮೂರ್ತಿಗಳಲ್ಲಿ ಬರುವ ವಾಮನರೂಪವೇ ಬೇರೆ. ತ್ರಿವಿಕ್ರಮನಂತೆಯೇ ವಾಮನ ಎಂಬ ಹೆಸರಿನ ಎರಡುರೂಪವಿದೆ ಎಂದು ತಿಳಿದುಕೊಳ್ಳಬೇಕು.

**"ವಾಮೌ ಪಲ್ಗುಪ್ರತೀಪೌ ದ್ವೌ"** ಎಂಬಲ್ಲಿ ವಾಮನ ಎಂಬ ಶಬ್ದಕ್ಕೆ ಪ್ರತೀಪ ಎಂಬ ಅರ್ಥವನ್ನು ತಿಳಿಸಿದ್ದಾರೆ. ಪತೀಪ ಅಂದರೆ ವಿರೋಧಿ ಎಂದು ಅರ್ಥ. ವಾಮಮ್=ಇಂದ್ರಾದಿ ದೇವತೆಗಳ ವಿರೋಧಿಯಾದ ಬಲಿಯನ್ನು ನ=ನಯತೀತಿ ಅಂದರೆ ಪಾತಾಳಕ್ಕೆ ಕಳುಹಿಸಿದವನು ಎಂದು ಅರ್ಥ.

**"ಖರ್ವೋ ಹ್ರಸ್ವಶ್ಚ ವಾಮನಃ"** ಎಂಬಲ್ಲಿ ವಾಮನ ಶಬ್ದಕ್ಕೆ ಹೃಸ್ವ ಎಂಬ ಅರ್ಥವನ್ನು ತಿಳಿಸಿದ್ದಾರೆ. ಹೃಸ್ವ ಎಂದರೆ ಸಣ್ಣದು ಎಂದು ಅರ್ಥ. ಅಂದರೆ ಬಲಿಯ ಅಹಂಕಾರ ನಿಗ್ರಹಕೋಸ್ಕರ ಸಣ್ಣರೂಪವನ್ನು ಧರಿಸಿದವನು ಎಂದು ಅರ್ಥ.

ವಾಮ ಶಬ್ದಕ್ಕೆ ವಕ್ರ ಎಂಬ ಅರ್ಥ. ವಕ್ರರು ಎಂದರೆ ದುಷ್ಟರು ಎಂದರ್ಥ. ದುಷ್ಟರನ್ನು ಅವರ ಸ್ವಭಾವಕ್ಕನುಗುಣವಾಗಿ ಕೆಟ್ಟ ಕೆಲಸವನ್ನು ಮಾಡುವಂತೆ ಪ್ರೇರೇಪಿಸುವವನು ಎಂದು ಅರ್ಥ.

**"ವಾಮಂ ಸವ್ಯೇ ಪ್ರತೀಪೇ ಚ ದ್ರವಿಣೇ ಚಾತಿ ಸುಂದರೇ "** ಎಂಬ ವಿಶ್ವಕೋಶದಲ್ಲಿ ವಾಮ ಶಬ್ದಕ್ಕೆ ಅತ್ಯಂತ ಸುಂದರ ಎಂದರ್ಥವನ್ನು ತಿಳಿಸಿದ್ದಾರೆ. ಸಾಧಕರಿಗೆ ಜ್ಞಾನಭಕ್ತ್ಯಾದಿಗಳನ್ನು ಕೊಡುವ ಮೂಲಕ ಸ್ವರೂಪತಃ ಅತ್ಯಂತ ಸುಂದರರನ್ನಾಗಿ ಮಾಡುವವನು ಎಂದರ್ಥ.

ವಾಮ ಅಂದರೆ ಸುಂದರ ವಸ್ತುಗಳು ಎಂದು ಅರ್ಥ. ಸುಂದರವಾದ ವಸ್ತುಗಳನ್ನು ಯೋಗ್ಯರಾದ ಜೀವರಾಶಿಗಳಿಗೆ ಕೊಡುವವನು ಆದ್ದರಿಂದ ಭಗವಂತನಿಗೆ ಈ ಹೆಸರು.

**"ವನನೀಯಃ ಸರ್ವೈಃ ದೇವೈಃ ಸಂಭಜನೀಯಃ ಇತಿ ವಾಮನಃ"** ಎಲ್ಲಾ ದೇವತೆಗಳಿಂದ ಭಜಿಸಲ್ಪಡುವವನಾದ್ದರಿಂದ ಭಗವಂತನಿಗೆ ಈ ಹೆಸರು. ಕಠೋಪನಿಷತ್ತೂ ಕೂಡ "ಮಧ್ಯೇ ವಾಮನಮಾಸೀನಂ ವಿಶ್ವೇದೇವಾ ಉಪಾಸತೇ" ಎಂಬಲ್ಲಿ ಇದನ್ನು ತಿಳಿಸುತ್ತದೆ.

"ಸರ್ವವೇದಾನಾಂ ವಮನಾತ್ ಉದ್ಗಿರಣಾತ್ ವಾಮನಃ" ಸಮಸ್ತ ವೇದಗಳನ್ನೂ ಕೂಡ ಸದಾಕಾಲ ಮುಖದಿಂದ ಹೊರಸೂಸುವವನಾದ್ದರಿಂದ ಭಗವಂತನಿಗೆ ಈ ಹೆಸರು. ಶ್ರೀಮಧ್ವಾಚಾರ್ಯರು ದ್ವಾದಶಸ್ತೋತ್ರದಲ್ಲಿ

**ಸಂತತಂ ಚಿಂತಯೇತ್ಕಂಠಂ ಭಾಸ್ವತ್‌ಕೌಸ್ತುಭಭಾಸಕಂ।**
**ವೈಕುಂಠಸ್ಯಾಖಿಲಾಃ ವೇದಾಃ ಉದ್ಗೀರ್ಯಂತೇಽನಿಶಂ ಯತಃ॥**

ಎಂಬಲ್ಲಿ ಭಗವಂತನ ಕಂಠವನ್ನು ವರ್ಣಿಸುತ್ತಾ ಸದಾಕಾಲ ವೇದಘೋಷವಾಗುತ್ತಲೇ ಇರುವಂತಹದು ಎಂದು ಸ್ತುತಿಸಿದ್ದಾರೆ. ಆದ್ದರಿಂದ ಈ ಹೆಸರು ಭಗವಂತನಿಗೆ ಅನ್ವರ್ಥಕವಾಗುತ್ತದೆ.

ವ=ಜ್ಞಾನರೂಪ ಎಂದರ್ಥ. ಆ=ಆನಂದರೂಪ ಎಂದರ್ಥ. ಮನ=ಮಾನ್ಯ ಎಂದರ್ಥ ಅಂದರೆ ಸಕಲ ಜೀವರಾಶಿಗಳಿಂದಲೂ ಮಾನ್ಯನಾದವನು ಎಂದರ್ಥ. ಒಟ್ಟಿಗೆ ವಾಮನ ಎಂದರೆ ಜ್ಞಾನಾನಂದ ಸ್ವರೂಪನಾಗಿ ಸರ್ವರಿಂದಲೂ ಮಾನ್ಯನಾದವನು ಎಂದು ಅರ್ಥ.

ಶ್ರೀಕನಕದಾಸರು **ಕಾಮಜನಕ ನಿನ್ನ ನಾಮ ಪ್ರೇಮದಿಂದ ಪಾಡುವಂಥ ನೇಮವೆನಗೆ ಪಾಲಿಸಯ್ಯ ಸ್ವಾಮಿ ವಾಮನ** ಎಂದು ಸ್ತುತಿಸಿದ್ದಾರೆ. ವೇದವ್ಯಾಸರು ತಾವು ರಚಿಸಿದ ಬ್ರಹ್ಮಾಂಡಪುರಾಣದ ಶ್ರೀದಧಿವಾಮನ ಸ್ತೋತ್ರದಲ್ಲಿ ಸಂಪೂರ್ಣವಾಗಿ ವಾಮನ ರೂಪಿ ಪರಮಾತ್ಮನನ್ನು ವರ್ಣಿಸುತ್ತಾ ಕೊನೆಯಲ್ಲಿ "ವಾಮನೋ ಬುದ್ಧಿದಾತಾ ಚ" ಎಂದು ಸ್ತುತಿಸಿದ್ದಾರೆ. ಅಂದರೆ ವಾಮನ ರೂಪಿ ಪರಮಾತ್ಮನು ಬುದ್ಧಿಯನ್ನು ಪ್ರೇರೇಪಿಸುವವನು ಎಂದು ಅರ್ಥ. ಭಗವಂತನ ಸ್ಮರಣೆಯಿಂದಲೇ ಭಗವಂತನ ಯಥಾರ್ಥ ಜ್ಞಾನಬಂದು ಭಗವಂತನ ಪ್ರಸಾದವಾಗಿ ಮೋಕ್ಷಲಭಿಸುತ್ತದೆ ಎಂಬುವುದು ಸಕಲ ಶಾಸ್ತ್ರಗಳು ಸಾರುತ್ತಿರುವ ವಿಚಾರ. ಆದ್ದರಿಂದ ನಾವು ಸದಾಕಾಲ ಭಗವಂತನನ್ನು ಸ್ಮರಿಸುತ್ತಾ ಇರಬೇಕು. ಆ ಸ್ಮರಿಸುವ ಸದ್ಬುದ್ಧಿಯು ನಮ್ಮಲ್ಲಿ ಮೇಳೈಸಬೇಕಾದರೆ ಬುದ್ಧಿ ಪ್ರೇರಕನಾದ ವಾಮನನನ್ನು ಪ್ರಾರ್ಥಿಸಬೇಕು. ಆದ್ದರಿಂದಲೇ ಕನಕದಾಸರು ಶ್ರೀವಾಮನರೂಪಿ ಪರಮಾತ್ಮನನ್ನು "ಮನ್ಮಥನ ತಂದೆಯಾದ ವಾಮನನೇ ನಿನ್ನ ಸ್ಮರಣೆಯನ್ನು ಸದಾಕಾಲ ಭಕ್ತಿಯಿಂದ ಮಾಡುವಂತೆ ನನ್ನ ಬುದ್ಧಿಯನ್ನು ಪ್ರೇರೇಪಿಸು". ಎಂದು ಪ್ರಾರ್ಥಿಸಿದ್ದಾರೆ. ಅವರು ಹೇಳಿದಂತೆ ನಾವು ಕೂಡ ಸದ್ಗತಿ ಪ್ರಾಪ್ತಿಗಾಗಿ ಸದ್ಬುದ್ಧಿಯನ್ನು ಕರುಣಿಸೆಂದು ವಾಮನನಿಗೆ ಭಕ್ತಿಯಿಂದ ಶಿರಬಾಗೋಣ. ★

# ಉಪನಿಷತ್ತುಗಳು ಮೆಚ್ಚಿದ ಭಾಷ್ಯ

–ಅನಂತಕೃಷ್ಣಾಚಾರ್ಯ

ತ್ರಿವಿಕ್ರಮಪಂಡಿತರು ಆಚಾರ್ಯರ ಮುಂಭಾಗದಲ್ಲಿ 'ಗುರುಗಳೇ; ತಮ್ಮಿಂದ ರಚಿತವಾದ ಈ ಉಪನಿಷದ್ ಭಾಷ್ಯಗಳೆಂಬ ಮನೆಯಲ್ಲಿ ಹತ್ತು ಉಪನಿಷತ್ತುಗಳೆಂಬ ಸುರಸುಂದರಿಯರನ್ನು ಇಷ್ಟಪಟ್ಟ ಸುರರು ಹೇಗೆ ಹಾಗೆ ಇಷ್ಟವಾದ ಅರ್ಥಗಳು ಆನಂದಪಡಿಸುತ್ತವೆ' ಎಂದು ನುಡಿದರು. ಈ ಮಾತಿನ ಆಂತರ್ಯ ಬಲು ಸುಂದರವಾಗಿದೆ.

ಉಪನಿಷತ್ತುಗಳಲ್ಲಿ ಹತ್ತು ಪ್ರಧಾನವಾದವು. ಸಾಮಾನ್ಯವಾಗಿ ಎಲ್ಲ ಮತಾಚಾರ್ಯರು ಈ ಹತ್ತನ್ನೇ ಅರ್ಥೈಸಲು ಆಯ್ದುಕೊಂಡದ್ದು. ತ್ರಿವಿಕ್ರಮಪಂಡಿತರು ಈ ಹತ್ತು ಉಪನಿಷತ್ತುಗಳನ್ನು ಹತ್ತು ಸುರಸುಂದರಿಯರಿಗೆ ಹೋಲಿಸಿದ್ದಾರೆ. ಬಲು ಸುಂದರವಾದ ಹೋಲಿಕೆ. ಹೆಣ್ಣು ಯಾವತ್ತು ತನ್ನನ್ನು ಮುಚ್ಚಿಕೊಂಡವಳು. ಉಪನಿಷತ್ತು ಹಾಗೆಯೇ ತನ್ನನ್ನು ಮುಚ್ಚಿಕೊಂಡಿದೆ. ಎತ್ತರದಲ್ಲಿರುವುದರಿಂದ (ಉಪರಿ) ಸುರಸ್ತ್ರೀಯರ, ಸುಂದರವಾಗಿ ಭಗವಂತನನ್ನು ವಿವರಿಸುವುದರಿಂದ ಸುಂದರಿಯ ಹೋಲಿಕೆ. ಉಳಿದ ಮತಾಚಾರ್ಯರುಈ ಉಪನಿಷತ್ತುಗಳ ಆಂತರ್ಯವನ್ನು ಅರಿಯದೆ ಕೇವಲ ಹೊರನೋಟದ ಅರ್ಥವನ್ನೇ ತಿಳಿಸಿದರು. ಉಪನಿಷತ್ತುಗಳಿಗೆ ಭಾಷ್ಯ ಬರೆದವರ ಪೈಕಿ ಸಮಗ್ರ ಉಪನಿಷತ್ತುಗಳನ್ನು ಭಗವತ್ಪರವಾಗಿ ಅರ್ಥೈಸಿದವರು ಆಚಾರ್ಯ ಶ್ರೀಮಧ್ವರು ಮಾತ್ರ. ಅದರಿಂದಲೆ ಆ ಅರ್ಥಗಳನ್ನು ಭಗವದ್ಭಕ್ತರಾದ ದೇವತೆಗಳಿಗೆ ಹೋಲಿಸಿದ್ದಾರೆ. ಉಪನಿಷತ್ತುಗಳು ಹೊರಟಿರುವುದೇ ಭಗವಂತನ ಅರಿವು ಮೂಡಿಸಲು. ಉಳಿದ ಮತಾಚಾರ್ಯರು ವೇದಗಳನ್ನು ಕರ್ಮಕಾಂಡ ಹಾಗೂ ಬ್ರಹ್ಮಕಾಂಡ ಎಂದು ಎರಡು ವಿಭಾಗ ಮಾಡಿ ಉಪನಿಷತ್ತುಗಳು ಬ್ರಹ್ಮಕಾಂಡವೆಂದೂ, ಪರಬ್ರಹ್ಮನ ಬಗ್ಗೆ ತಿಳಿಸುತ್ತವೆಂದು ಹೇಳಿದರೂ ಹಾಗೆ ಸಂಪೂರ್ಣವಾಗಿ ಅರ್ಥೈಸಲು ಸಾಧ್ಯವಾಗದೆ ಸೋತರು. ಆಚಾರ್ಯರು ಸಂಪೂರ್ಣ ಉಪನಿಷತ್ತುಗಳನ್ನು ಭಗವತ್ಪರವಾಗಿ ಅರ್ಥೈಸುವ ಮೂಲಕ ಹೇಗೆ ದೇವತೆಗಳು ತಮ್ಮನ್ನು ಇಚ್ಛಿಸುವ ಸುರಸುಂದರಿಯರ ಮನದಭಿಲಾಷೆಯನ್ನು ತಿಳಿದು ಸಂತೋಷಪಡಿಸುವಂತೆ ಉಪನಿಷತ್ತಿನ ನಿಜವಾದ ಉದ್ದೇಶವನ್ನು ಅರಿತು ಯುಕ್ತವಾಗಿ ಅರ್ಥೈಸುವ ಮೂಲಕ ಉಪನಿಷತ್ತುಗಳನ್ನು ಸಂತೋಷಗೊಳಿಸಿದರು. ಇಲ್ಲಿ ಆಚಾರ್ಯರ ಭಾಷ್ಯವೆಂಬುದೊಂದು ಸುರಮಂದಿರ. ಹೇಗೆ ಸುರಸುಂದರಿಯರನ್ನು ಸುರರು ತಮ್ಮ ಮಂದಿರದಲ್ಲಿ ಸಂತೋಷಪಡಿಸುತ್ತಾರೋ ಹಾಗೆಯೇ

ಆಚಾರ್ಯರ ಭಾಷ್ಯದಲ್ಲಿರುವ ಅರ್ಥಗಳು ಉಪನಿಷತ್ತನ್ನು ಸಂತೋಷಪಡಿಸುತ್ತವೆ. ಅಂದರೆ ಆಚಾರ್ಯರ ಭಾಷ್ಯದಿಂದಾಗಿ ಉಪನಿಷತ್ತಿನ ನಿಜವಾದ ಅರ್ಥವು ಚೆನ್ನಾಗಿ ಅರ್ಥವಾಗುತ್ತವೆ' ಎಂದು ಆಂತರ್ಯ.

## ಗೀತಾಭಾಷ್ಯ-ಗೀತಾತಾತ್ಪರ್ಯಗಳೆಂಬ ಸೂರ್ಯ-ಚಂದ್ರರು

ಮುಂದೆ ತ್ರಿವಿಕ್ರಮಪಂಡಿತರು 'ಗುರುಗಳೇ, ತಾವು ರಚಿಸಿದ ಗೀತಾಭಾಷ್ಯ ಹಾಗೂ ಗೀತಾತಾತ್ಪರ್ಯ ಗ್ರಂಥಗಳು ಸೂರ್ಯ-ಚಂದ್ರರು ತಮ್ಮ ಕಿರಣಗಳಿಂದ ಜಗತ್ತನ್ನು ಬೆಳಗುವಂತೆ ಎದುರಿಲ್ಲದ ತಮ್ಮ ನುಡಿಗಳಿಂದ ಎಲ್ಲವನ್ನೂ ಬೆಳಗುತ್ತಿವೆ' ಎಂದು ನುಡಿದರು.

ಗೀತಾಭಾಷ್ಯ ಹಾಗೂ ಗೀತಾತಾತ್ಪರ್ಯಗಳು ಕೇವಲ ಗೀತೆಗಷ್ಟೆ ಸೀಮಿತವಲ್ಲ. ಸಮಸ್ತ ಪ್ರಮೇಯಸಮೂಹಗಳನ್ನು ಅರ್ಥೈಸಲು ಜಗತ್ತನ್ನು ಬೆಳಗುವ ಸೂರ್ಯ-ಚಂದ್ರರಂತೆ ಸಮರ್ಥವಾಗಿವೆ.

ಜಗತ್ತು ಅಜ್ಞಾನವೆಂಬ ಕತ್ತಲೆಯಲ್ಲಿ ಮುಳುಗಿದ್ದಾಗ ಸಜ್ಜನರಿಗೆ ದಾರಿತೋರಲು ಮೊದಲು ಗೀತಾಭಾಷ್ಯವೆಂಬ ಹುಣ್ಣಿಮೆಯ ಚಂದ್ರನ ಉದಯ. ಬಳಿಕ ಗೀತಾ ತಾತ್ಪರ್ಯವೆಂಬ ಸೂರ್ಯೋದಯ. ಹೀಗೆ ಸಜ್ಜನಸಮೂಹಕ್ಕೆ ಗೀತಾಭಾಷ್ಯ ಹಾಗೂ ಗೀತಾತಾತ್ಪರ್ಯಗಳು ಚಂದ್ರ-ಸೂರ್ಯರಂತೆ ಹಗಲು-ರಾತ್ರಿಗಳಲ್ಲಿ (ಸುಖ-ಕಷ್ಟಗಳಲ್ಲಿ) ದಾರಿ ದೀಪಗಳು.

ತ್ರಿವಿಕ್ರಮಪಂಡಿತರ ಮುಂದಿನ ನುಡಿ 'ಗುರುಗಳೇ; ಇತಿಹಾಸ, ಪುರಾಣಗಳೆಂಬ ಸಮುದ್ರವನ್ನು ತಮ್ಮ ಮನಸ್ಸೆಂಬ ಮಂದರಪರ್ವತದಿಂದ ಕಡೆದಾಗ ಮೂಡಿ ಬಂದ 'ಮಹಾಭಾರತ ತಾತ್ಪರ್ಯ ನಿರ್ಣಯ'ವನ್ನು ಯಾವ ಸಜ್ಜನ ತಾನು ಸೇವಿಸದಿರುತ್ತಾನೆ' ಎಂದು.ಈ ಮಾತಿನ ತಾತ್ಪರ್ಯ ಹೀಗಿದೆ. ದರ್ಶನ, ಗುಹ್ಯ, ಸಮಾಧಿ ಎಂಬ ಮೂರು ಭಾಷೆಗಳಿಂದ, ನೂರು ರೀತಿಗಳಿಂದ ಕೂಡಿರುವ ಮಹಾಭಾರತ ಹಾಗೂ ಅಷ್ಟಾದಶಪುರಾಣ ಮುಂತಾದುವು ಸಮುದ್ರವಿದ್ದಂತೆಯೇ ಸರಿ. ಸಮುದ್ರದ ಆಳ ತಿಳಿಯದು. ಈ ಗ್ರಂಥಗಳ ಅರ್ಥ ಅರಿಯದು. ಅದರಿಂದಲೆ ಉಳಿದವರು ಇವುಗಳ ತಂಟೆಗೆ ಹೋಗದೆ ಕೈಬಿಟ್ಟರು. ಆಚಾರ್ಯರು ಇವುಗಳನ್ನು ಸಾಕ್ಷಾತ್ ವೇದವ್ಯಾಸರಿಂದ ಕೇಳಿ; ಅನೇಕ ಗ್ರಂಥಗಳನ್ನು ಪರಿಶೀಲಿಸಿ ಕಡೆಗೆ ರಚಿಸಿದ್ದೇ ಮಹಾಭಾರತ ತಾತ್ಪರ್ಯನಿರ್ಣಯ. ಇದು ಅಮೃತದಂತೆ ಮೃತಿಯಿಂದ ದೂರಮಾಡಿ ಸಾವಿಲ್ಲದ ಮೋಕ್ಷದೆಡೆಗೆ ಕೊಂಡೊಯ್ಯುತ್ತದೆ.

**(ಸಶೇಷ)**

ಪುರಾಣ ಪರಿಚಯ

ಭಾಗ-33

# ಶ್ರೀವಿಷ್ಣುಪುರಾಣ

## ದೈತ್ಯ ಬಾಲಕರಿಗೆ ಪ್ರಹ್ಲಾದನ ಉಪದೇಶ

-ಸ್ಫೂರ್ತಿ

ಹಿರಣ್ಯಕಶಿಪು ಚಿಂತಾಕ್ರಾಂತನಾದ. ಮಗನಾದ ಪ್ರಹ್ಲಾದನನ್ನು ಮುಂದೇನು ಮಾಡುವುದೆಂದು ಯೋಚಿಸಲು ತೊಡಗಿದಾಗ ಆತನ ಪುರೋಹಿತರು ಬಂದರು. 'ಹೇ ರಾಜನೇ, ನಿನ್ನ ಮಗನಾದ ಈ ಪುಟ್ಟ ಹುಡುಗನ ಮೇಲಿನ ಕೋಪವನ್ನು ನಿಗ್ರಹಿಸು. ನಿನ್ನ ಕೋಪ ಈಗಾಗಲೆ ದೇವತೆಗಳ ಮೇಲೆ ಸಫಲವಾಗಿದೆಯಷ್ಟೆ. ನಾವು ನಿನ್ನ ಮಗನನ್ನು ನಮ್ಮ ಶತ್ರುಗಳಾದ ದೇವತೆಗಳ ಮೇಲೆ ಹೇಗೆ ಎರಗಿ ಹೋಗುತ್ತಾನೋ ಹಾಗೆ ಸರಿಪಡಿಸುತ್ತೇವೆ. ಯಾವತ್ತೂ ಬಾಲ್ಯವೆಂಬುದು ಸರ್ವದೋಷಗಳ ಆಕರ. ಆದ್ದರಿಂದ ಕೋಪವನ್ನು ಬಿಡು. ಒಂದೊಮ್ಮೆ ಇವನು ಹರಿಯ ಪಕ್ಷವನ್ನು ತೊರೆಯದಿದ್ದರೆ ನಾವೇ ದುಷ್ಟಶಕ್ತಿಯನ್ನು ಸೃಷ್ಟಿಸಿ ಈತನನ್ನು ಮುಗಿಸಿ ಬಿಡುತ್ತೇವೆ' ಎಂದು ನುಡಿದರು. ಹಿರಣ್ಯಕಶಿಪು ಸ್ವಲ್ಪ ನಿರಾಳನಾದ. ಪುರೋಹಿತರೊಡನೆ ಪ್ರಹ್ಲಾದನನ್ನು ಮತ್ತೆ ಆಶ್ರಮಕ್ಕೆ ಕಳುಹಿಸಿದ.

ಮತ್ತೆ ಗುರುಕುಲ ಸೇರಿದ ಪ್ರಹ್ಲಾದನು ಗುರುಗಳು ಇಲ್ಲದ ಬಿಡುವಿನ ವೇಳೆಯಲ್ಲಿ ಎಲ್ಲ ದೈತ್ಯ ಬಾಲಕರನ್ನು ಒಟ್ಟು ಸೇರಿಸಿ ಹೀಗೆ ನುಡಿಯುತ್ತಿದ್ದ. 'ಎಲೈ ದೈತ್ಯ ಬಾಲಕರೇ, ನನ್ನ ಮಾತನ್ನು ಆಲಿಸಿರಿ. ಇದು ಶ್ರೇಯಸ್ಸಿಗೆ ಕಾರಣವಾದ ವಿಚಾರ. ಇದರಲ್ಲಿ ಯಾವುದೇ ಲೋಭಿತನವಿಲ್ಲ. ಒಬ್ಬ ವ್ಯಕ್ತಿಗೆ ಜನ್ಮ, ಬಾಲ್ಯ, ಯೌವನ, ವೃದ್ಧಾಪ್ಯ, ಸಾವು ಮತ್ತೆ ಜನ್ಮ ಹೀಗೆ ಇವೆಲ್ಲವೂ ಒಂದರ ಮೇಲೊಂದರಂತೆ ಬಂದೆರಗುತ್ತವೆ. ಇವೆಲ್ಲವೂ ದುಃಖದಿಂದಲೆ ಕೂಡಿವೆ ಎಂಬುದನ್ನು ಮರೆಯಬೇಡಿ. ಆದರೆ ಭ್ರಾಂತಿಯಲ್ಲಿ ಸಿಲುಕಿದ ಮನುಷ್ಯನು ದುಃಖವನ್ನೇ ಸುಖವೆಂದು ಭ್ರಮಿಸುತ್ತಾನೆ.

ಕಫ, ವಾತ, ಪಿತ್ತಗಳಿಂದ ಕೂಡಿದ ಈ ದೇಹವೆಲ್ಲಿ? ಕಾಂತಿ, ಶೋಭೆ, ಸೌಂದರ್ಯ ಮುಂತಾದ ಗುಣಗಳೆಲ್ಲಿ? ಭ್ರಾಂತನಾದ ವ್ಯಕ್ತಿ ಇವೆಲ್ಲವೂ ದೇಹದಲ್ಲಿಯೇ ಇವೆ ಎಂದು ತಿಳಿದು ಸುಖಿ ಎಂದು ಎಣಿಸುತ್ತಾನೆ. ವಸ್ತುತಃ ಈ ಗುಣಗಳು ಸಾಧನೆಯಿಂದ ದೊರೆಯುವಂಥವು.

ಮಾಂಸ, ರಕ್ತ, ಮಲ, ಮೂತ್ರಗಳ ಆಕರವಾದ ಈ ದೇಹದಲ್ಲಿಯೇ ಅತ್ಯಂತ ಪ್ರೀತಿಯುಳ್ಳವನಾದರೆ ನರಕದಲ್ಲಿಯೂ ಈ ದೇಹದ ಕಾಟ ತಪ್ಪದು.

ಮನುಷ್ಯ ತನಗೆ ಪ್ರಿಯವಾದ ಯಾವ ವಸ್ತುಗಳನ್ನು ಮನಸ್ಸಿನಲ್ಲಿ ಇರಿಸಿಕೊಳ್ಳುತ್ತಾನೋ

ಅದೇ ಆತನಿಗೆ ದುಃಖಕ್ಕೆ ಕಾರಣವಾಗುತ್ತದೆ. ಆಯಾ ವಸ್ತುವಿನ ಮೇಲೆ ಇರಿಸಿದ ಪ್ರೀತಿಯಿಂದಾಗಿಯೆ ಹೊರಗಿನಿಂದ ಆ ವಸ್ತುವು ಸುಟ್ಟರೆ ಮನಸ್ಸಿನಲ್ಲಿಯೂ ಸುಟ್ಟು ವೇದನೆಯನ್ನುಂಟು ಮಾಡುತ್ತದೆ.

ಈ ಜೀವನಿಗೆ ಸಂಸಾರದಲ್ಲಿರುವಷ್ಟು ಕಾಲವೂ ಎಲ್ಲವೂ ದುಃಖಮಯವಾದದ್ದೇ ಹೊರತು ಯಾವುದೂ ಸುಖಮಯವಲ್ಲ. ಇಂತಹ ದುಃಖಮಯ ಸಂಸಾರದಿಂದ ಬಿಡುಗಡೆಗೊಳಿಸಿ ಮೋಕ್ಷದ ಆನಂದದ ಕಡಲಿನಲ್ಲಿ ನಮ್ಮನ್ನು ತೇಲಿಸಲು ಸಮರ್ಥನಾದವನು ಶ್ರೀವಿಷ್ಣು ಮಾತ್ರ. ಅವನ ಆರಾಧನೆಯೇ ಸಂಸಾರ ನಾಶಕ, ಮೋಕ್ಷದಾಯಕ.

ನಾವಿನ್ನು ಬಾಲಕರು; ಈಗಲೇ ನಾವೇನು ವಿಷ್ಣುವನ್ನು ಆರಾಧಿಸುವುದು? ಎಂದು ಹೇಳಬೇಡಿ. ಬಾಲ್ಯ, ಯೌವನ, ವೃದ್ಧಾಪ್ಯ ಮುಂತಾದುವು ದೇಹಕ್ಕೆ ಸಂಬಂಧಿಸಿದ ಧರ್ಮವೇ ಹೊರತು ಜೀವನಿಗಲ್ಲ, ಆದ್ದರಿಂದ ವಿಷ್ಣುವನ್ನು ಆರಾಧಿಸಲು ಬಾಲ್ಯ, ಯೌವನ ಮುಂತಾದ ಯಾವ ಅವಸ್ಥೆಯೂ ಅಡ್ಡಿ ಮಾಡಲಾರವು. ಕೇವಲ ಶುದ್ಧ ಮನಸ್ಸು ಬೇಕಷ್ಟೆ. ಆದ್ದರಿಂದ ಬಾಲ್ಯ, ಯೌವನ ಮುಂತಾದ ದೇಹದ ಅವಸ್ಥೆಗಳಿಗೆ ಸಿಲುಕದೆ ಶುದ್ಧ ಮನಸ್ಸಿನಿಂದ ಶ್ರೀವಿಷ್ಣುವನ್ನು ಆರಾಧಿಸಿರಿ. ಆತನನ್ನು ಆರಾಧಿಸಲು ಕಷ್ಟವೇನಿದೆ? ಸ್ಮರಣೆ ಮಾತ್ರದಿಂದಲೆ ಪಾಪ ತೊಲಗಿ ಇಚ್ಛೆಗಳು ಕೈಗೂಡುತ್ತವೆ. ಎಲ್ಲರೊಳಗಿರುವ ಅವನಲ್ಲಿ ಹಗಲು-ರಾತ್ರಿ ಮನಸ್ಸನ್ನಿರಿಸಿರಿ. ಎಂದಿಗೂ ಅವನಲ್ಲಿ ಪ್ರೀತಿ ಹೆಚ್ಚುತ್ತಿರಲಿ. ಅದೇ ಸಕಲ ಸಂಕಟನಿವಾರಕ.

ನಾವೇ ತಾಪತ್ರಯದಲ್ಲಿ ಸಿಲುಕಿರುವಾಗ ಇನ್ನೊಬ್ಬರ ಮೇಲೆ ದ್ವೇಷವೇಕೆ? ಒಂದೊಮ್ಮೆ ನಾನೇ ಅತ್ಯಂತ ಹೀನನಾದರೂ ಉಳಿದವು ಚೆನ್ನಾಗಿದ್ದರೂ ದ್ವೇಷ ಬೇಡ. ಏಕೆಂದರೆ ದ್ವೇಷದ ಫಲವೇ ದುಃಖ. **(ಸಶೇಷ)**

**ಪತಿತಸ್ಯಾಸ್ಯದೇಹಸ್ಯ ಕಾಷ್ಠವಿಷ್ಠಾಸಮಸ್ಯ ಚ ।**
**ಫಲಾನಿ ತ್ರೀಣಿ ಶಿಷ್ಯಂತೆ ವಿದ್ಯಾಕರ್ಮ ಸುತಾ ಇತಿ ॥**

(ಆಚಾರ್ಯಮಧ್ವರು)

ಒಂದು ದಿನ ಅವಶ್ಯವಾಗಿ ಸತ್ತು ಬೀಳತಕ್ಕ, ಬಿದ್ದ ಸ್ವಲ್ಪ ಸಮಯದಲ್ಲಿಯೇ ಕಟ್ಟಿಗೆಯಂತೆ ಆಗುವ, ಮತ್ತು ಕೆಲವು ಸಮಯ ಹಾಗೆ ಇಟ್ಟಲ್ಲಿ ವಿಷ್ಠೆಯತೆ ವಾಸನೆ ಬರುವ ಈ ದೇಹಕ್ಕೆ (ದೇಹದಲ್ಲಿದ್ದ ಜೀವನಿಗೆ) ಪರಲೋಕದಲ್ಲಿ ಒಟ್ಟಿಗೆ ಬರುವ ವಿಷಯಗಳು ಮೂರು. 1) ಪಡೆದ ಜ್ಞಾನ 2) ಮಾಡಿದ ಕರ್ಮ 3) ಸಂತತಿ

ಭಾಗ–3

# ವಿಶ್ವನ(ದ)ಲ್ಲಿ ವಿಶ್ವರೂಪದ(ನ) ದರ್ಶನ

–ಡಿ. ಗುರುಪ್ರಸಾದ್ ಭಟ್

ವಿಷ್ಣುವಿನ ಸಹಸ್ರನಾಮಗಳಲ್ಲಿ ಈ 'ವಿಶ್ವ' ಎಂಬ ನಾಮವು ತನ್ನದೇ ಆದ ವಿಶಿಷ್ಟತೆಯನ್ನು ಪಡೆದಿದೆ. ' **ಓತತ್ವವಾಚೀಹ್ಯೋಂಕಾರೋ ವಕ್ತ್ಯಸೌ ತದ್‌ಗುಣೋತತಾಂ'** ಎಂಬಂತೆ ಭಗವಂತನ ವ್ಯಾಪ್ತತೆ, ಜ್ಞಾನಾದಿ ಸರ್ವಗುಣಪೂರ್ಣತ್ವ, ಜಗತ್‌ವ್ಯಾಪ್ತತ್ವ ಮೊದಲಾದ ವಿಶೇಷಾರ್ಥದಲ್ಲಿ ಈ ಶಬ್ದ ತೆರೆದುಕೊಳ್ಳುವುದರಿಂದ ಆರಂಭದಲ್ಲಿ ಮಂಗಳವಾಚಕ ಶಬ್ದವಾಗಿ ಸ್ತುತಿಸಲ್ಪಟ್ಟಿದೆ. **'ಓಂ ಭೂಮ್ನಃ ಕ್ರತುವತ್ ಜ್ಞಾಯಸ್ತ್ವಂ ತಥಾಹಿದರ್ಶಯತಿ,' 'ಬ್ರಹ್ಮದೃಷ್ಟಿಃ ಉತ್ಕರ್ಷಾತ್'** ಎಂಬುದಾಗಿ ಬ್ರಹ್ಮಸೂತ್ರಗಳಲ್ಲಿ ಪ್ರತಿಪಾದಿಸಲ್ಪಟ್ಟಂತೆ, ವಿಷ್ಣುವಿನ ಸರ್ವಗುಣಗಳಲ್ಲಿ ಈ ಭೂಮ (ಗುಣಪರಿಪೂರ್ಣತೆ) ಎಂಬ ಗುಣಕ್ಕನೇ ಶ್ರೇಷ್ಠತ್ವ ಇರುವುದರಿಂದ ಅದನ್ನೇ ಪ್ರತಿಪಾದಿಸುವ ಈ ವಿಶ್ವ ಶಬ್ದವು ಮೊದಲು ಉಲ್ಲೇಖಿಸಲ್ಪಟ್ಟಿದೆ. **'ವಿಶ್ವನಾಮಾ ಸ ಭಗವಾನ್ ಯತಃ ಪೂರ್ಣಗುಣಃ ಪ್ರಭುಃ ಮತ್ತು ಸರ್ವಂ ಸಮಸ್ತಂ ವಿಶ್ವಂಚ ಅನಂತಂ ಪೂರ್ಣಮೇವಚ'** ಇತ್ಯಾದಿ ಪ್ರಮಾಣಗಳಿಂದ ವಿಶ್ವ ನಾಮದ ಮಹತ್ವವನ್ನು ತಿಳಿಯಬಹುದಾಗಿದೆ. ಕಾರ್ಯ ಕಾರಣಗಳಿಗೆ ಏಕ ಶಬ್ದ ವ್ಯವಹಾರವು ಶಬ್ದ ನಿರ್ಣಯದಲ್ಲಿ ಪ್ರತಿಪಾದಿಸಲ್ಪಟ್ಟಿರುವುದರಿಂದ ವಿಶ್ವ ಕಾರಣತ್ವ ಭಗವಂತನಿಗೇ ಇರುವುದರಿಂದ ಅವನೇ ವಿಶ್ವ ಶಬ್ದದಿಂದ ಪ್ರತಿಪಾದಿಸಲ್ಪಟ್ಟಿದ್ದಾನೆ. ಶರೀರ ಪ್ರವಿಷ್ಟತ್ವ ಮತ್ತು ಜೀವನಿಯಾಮಕತ್ವ ವಿಶ್ವನಿಗೇ ಇರುವುದರಿಂದ ಜೀವನು ಅವನ ಅಧೀನನಾಗಿರುವುದರಿಂದ ವಿಷ್ಣುವು ವಿಶ್ವನೆನಿಸಿದ್ದಾನೆ. **'ಯದೋಷಧೀಭಿಃ ಪುರುಷಾನ್‌ಪಶೂನ್‌ಶ್ಚ ವಿವೇಶ ಭೂತಾನಿ ಚರಾಚರಾಣಿ'** ಎಂಬ ಶ್ರುತಿ ವಾಕ್ಯದಂತೆ ನಿಯಾಮಕನಾಗಿ ಎಲ್ಲಾ ಜೀವರುಗಳ ದೇಹದ ಒಳಗೆ ಪ್ರವೇಶಿಸುವುದರಿಂದ ಅವನು ವಿಶ್ವನಾಗಿದ್ದಾನೆ. ಮೋಕ್ಷವನ್ನು ಹೊಂದುವಾಗಲೂ, ಪ್ರಳಯ ಕಾಲದಲ್ಲೂ ಎಲ್ಲಾ ಜೀವರಾಶಿಗಳು ಇವನನ್ನು ಪ್ರವೇಶಿಸುವುದರಿಂದ ಇವನು ವಿಶ್ವನಾಗಿದ್ದಾನೆ. **'ಯತ್‌ಪ್ರಯಂತ್ಯಭಿಸಂವಿಶಂತೀತಿ'** ಎಂಬ ಶ್ರುತಿ ವಾಕ್ಯವೇ ಇದಕ್ಕೆ ಪ್ರಮಾಣವೆನಿಸಿದೆ ತಾನೇ? ವಿಶ್ವ ಶಬ್ದದ ಶಕಾರ, ವಕಾರಗಳಿಗೆ ಕ್ರಮವಾಗಿ ಆನಂದ ಮತ್ತು ಜ್ಞಾನವಾಚಿತ್ವ ಇರುವುದರಿಂದ ಮತ್ತು ವಿಶಿಷ್ಟತ್ವ, ಜ್ಞಾನಪೂರ್ಣತ್ವ ಅವನಲ್ಲಿ ಇರುವುದರಿಂದ ವಿಶ್ವನೆನಿಸಿದ್ದಾನೆ. **'ಸುವಃ ಸುಬಲರೂಪತ್ವಾತ್'** ಎಂಬ ಪ್ರಮಾಣದಂತೆ 'ವ' ಶಬ್ದಕ್ಕೆ ಬಲವಾಚಿತ್ವ ಇರುವುದರಿಂದ ವಿಶಿಷ್ಟ ಬಲ ಸ್ವರೂಪನಾದ್ದರಿಂದಲೂ ಅವನು ವಿಶ್ವ. **ವಿನಾ (ಪಕ್ಷಿಣ್) ಗರುಡೇನ ಶ್ವಯತೀತಿ ವಿಶ್ವಂ** ಎಂಬ ನಿರ್ವಚನದ ಪ್ರಕಾರ

ಗರುಡವಾಹನನಾದ್ದರಿಂದ ವಿಶ್ವ.

ಈ ರೀತಿಯಾಗಿ **'ತ್ರಯೋರ್ಥಾಃ ಸರ್ವವೇದೇಷು ದಶಾರ್ಥಾಃ ಸರ್ವಭಾರತೇ ವಿಷ್ಣೋಃ ಸಹಸ್ರ ನಾಮಾಪಿ ನಿರಂತರಶತಾರ್ಥಕಂ'** ಎಂಬಂತೆ ಸಹಸ್ರನಾಮದಲ್ಲಿ ಬರುವ ವಿಶ್ವ ಶಬ್ದಕ್ಕೆ ಕನಿಷ್ಠ ನೂರು ಅರ್ಥಗಳಿವೆ. ಈ ರೀತಿ ಯಥಾಶಕ್ತಿ ನಿರ್ವಚನಗಳನ್ನು ನಾವೀಗ ತಿಳಿಯಬಹುದಾಗಿದೆ. ವಿಶ್ವ ಶಬ್ದಕ್ಕೆ ಜಗತ್ತು ಎಂಬ ಅರ್ಥವು ಇದೆ.

ವಿಷ್ಣು ಜಗದ್ರೂಪದಿಂದ ವಿಕಾರವನ್ನು ಹೊಂದಿದವನು ಎಂದು ವಿಶ್ವ ಶಬ್ದಕ್ಕೆ ಅರ್ಥವನ್ನು ಮಾಡುವಂತಿಲ್ಲ. ಏಕೆಂದರೆ ವಿಷ್ಣು ಗುಣಪರಿಪೂರ್ಣ. ಜಡ ವಿಶ್ವದಲ್ಲಿ ನಾವು ದೋಷವನ್ನು ಕಾಣುತ್ತೇವೆ. ಜಡ ವಿಶ್ವಕ್ಕೆ ಅನಿತ್ಯತ್ವವೂ ಇದೆ. ಆದ್ದರಿಂದ ವಿಷ್ಣುವು ಜಗದ್ರೂಪನಲ್ಲ. ವಿಶ್ವ ಶಬ್ದಕ್ಕೆ ಜಗದ್ರೂಪತ್ವ ರೂಪ ಅರ್ಥವನ್ನು ತಿಳಿದರೆ ವಿಶ್ವನಾಮವು ವಿಷ್ಣುವಿನ ಗುಣಪ್ರತಿಪಾದಕವು ಆಗುವುದಿಲ್ಲ. **'ವಿಶ್ವಃ ಪೂರ್ಣಸ್ತಥಾ ಸರ್ವಃ'** ಎಂಬ ಕೋಶದಲ್ಲಿ ಪೂರ್ಣಾರ್ಥಕವಾದ ವಿಶ್ವ ಶಬ್ದವು ಪುಲ್ಲಿಂಗವಾದ್ದರಿಂದ ವಿಶ್ವಂ ಎಂಬುದಾಗಿ ನಪುಂಸಕಲಿಂಗವಾಗಿ ಯಾಕೆ ಪ್ರತಿಪಾದಿಸಲ್ಪಟ್ಟಿದೆ? ಅಂದರೆ ವಿಶ್ವಾದಿ ಸಹಸ್ರನಾಮಗಳು ಪರಮಾತ್ಮನ ಸಹಸ್ರರೂಪ ವಾಚಕಗಳು. ರೂಪ ಶಬ್ದವು ನಪುಂಸಕವಾದ್ದರಿಂದ ಅದಕ್ಕೆ ವಿಶೇಷಣವಾದ ವಿಶ್ವ ಶಬ್ದವು ನಪುಂಸಕವಾಯಿತು. ಈ ರೀತಿಯಾಗಿ ವಿಶ್ವನಾಮದ ಬಗ್ಗೆ ಇರತಕ್ಕ ಗೊಂದಲ, ಪೂರ್ವಪಕ್ಷಗಳನ್ನು ಪರಿಹರಿಸಬಹುದು. **(ಸಶೇಷ)**

---

(28ನೇ ಪುಟದಿಂದ...)

ಹೇಳಿದಾಗ **'ತಥಾಸ್ತು'** ಎಂದು ಹೇಳಿ ದೇವತೆಗಳು ಅಂತರ್ಧಾನರಾದರು. ಅನಸೂಯೆಯ ಪಾತಿವ್ರತ್ಯಕ್ಕೊಲಿದು ಭೂಮಿಯಲ್ಲಿ ಸಾಕ್ಷಾತ್ ಅವತಾರವಿಲ್ಲದ ಬ್ರಹ್ಮದೇವರು ಸೋಮನಲ್ಲಿ ಸನ್ನಿಹಿತರಾಗಿ ಅನಸೂಯೆಯಲ್ಲಿ ಹುಟ್ಟಿದರು. ನಾರಾಯಣ ದತ್ತನಾಗಿ ಕಾಣಿಸಿಕೊಂಡ. ದೂರ್ವಾಸರಾಗಿ ರುದ್ರದೇವರು ಅವತರಿಸಿದರು. **'ಸರ್ವಕಾಮ ಫಲಪ್ರಾಪ್ತಿಃ ಪತ್ಯುಃ ಶುಶ್ರೂಷಣಾತ್ ಸ್ತ್ರಿಯಃ'** ಎಂಬ ಸೂಕ್ತಿಗೆ ಪ್ರಾಯೋಗಿಕ ವ್ಯಾಖ್ಯಾನ ಅನಸೂಯಾ ಚರಿತ್ರೆ. ಅತ್ರಿ ಮಹರ್ಷಿಗಳ ತಪಸ್ಸಿನ ಅರ್ಧ ಫಲವನ್ನು ಪತಿಶುಶ್ರೂಷೆಯಿಂದಲೇ ಪಡೆದ ಮಹಿಳೆ. **'ಪುಣ್ಯಸ್ಯ ಅರ್ಧಾಪಹಾರಿಣ್ಯಃ ಪತಿಶುಶ್ರೂಷಯೈವ ಹ'** ಸ್ತ್ರೀಗೆ ಮುಖ್ಯ ಪೂಜೆ ಪತಿ ಸೇವೆ. ಇದನ್ನು ಅನುಷ್ಠಾನಕ್ಕೆ ತಂದು ಜೀವನ ನಡೆಸಿದ ಫಲವಾಗಿಯೇ ಲೋಕವನ್ನಾಳುವ ಮೂರು ಶಕ್ತಿಗಳು ಅನುಸೂಯೆಯ ಗರ್ಭವನ್ನು ಬೆಳಗಿದರು. ಚಂದ್ರ ನಭೋಮಂಡಲವನ್ನು ಸೇರಿದ. ದೂರ್ವಾಸರು ವಿರಕ್ತರಾಗಿ ಪರಿವ್ರಾಜಕರಾದರು. ಮಾತಾಪಿತೃಗಳ ಸೇವೆಗೆ ತನ್ನನ್ನು ಅರ್ಪಿಸಿಕೊಂಡ ನಾರಾಯಣ ಆಶ್ರಮದಲ್ಲೇ ನಿಂತ. ದತ್ತಾತ್ರೇಯನೆಂದೆನಿಸಿದ. **(ಸಶೇಷ)**

ಪ್ರಶ್ನೋತ್ತರ–ಪದಬಂಧ

# ನೆನಪಿನ ಅಂಗಳ

–ವಿ॥ ಶಂಕರನಾರಾಯಣಾಚಾರ್ಯ

1) ವಸುದೇವನ ತಂದೆ ಯಾರು?

2) ಬಲರಾಮನ ಆಯುಧ ಯಾವುದು?

3) ಕೃಷ್ಣ–ಬಲರಾಮರ ತಂಗಿ ಯಾರು?

4) ಕೃಷ್ಣನು ಸಾಂದೀಪನಿ ಗುರುಗಳಿಗೆ ನೀಡಿದ ಗುರುದಕ್ಷಿಣೆ ಏನು?

5) ಕೃಷ್ಣಾವತಾರ ಎಷ್ಟನೆಯದು?

6) ಕೃಷ್ಣನಿಗೆ ಪಟ್ಟದ ರಾಣಿಯರು ಎಷ್ಟು ಮಂದಿ?

7) ಸಾಂಬನು ಹೆತ್ತದ್ದೇನು?

8) ಪರೀಕ್ಷಿತ್‌ನ ತಂದೆ–ತಾಯಿಗಳಾರು?

9) ಸುಭದ್ರೆಯ ಗಂಡ ಯಾರು?

10) ಕೃಷ್ಣನು ಗೀತೋಪದೇಶ ಮಾಡಿದ ಸ್ಥಳ ಯಾವುದು?

## ಪದ ಬಂಧದ ಉತ್ತರ

1) ಪರಾಶರ 2) ಬೃಹನ್ನಳೆ 3) ಘಟೋತ್ಕಚ 4) ದುರ್ವಾಸ, ಅಶ್ವತ್ಥಾಮ 5) ರೋಹಿಣೀ 6) ದುಃಶಲಾ 7) ದೇವವ್ರತ 8) ಕುಂತಿ, ಮಾದ್ರಿ 9) ಕೃಪಿ 10) ಶೃಂಗೀ

| | | | | | |
|---|---|---|---|---|---|
| 1 ಹ | ಲ | 2 ಸು | | 3 ಕಾ | ಲ |
| ಸಿ | | 4 ಧ | ರ್ಮ | ರ | ತ |
| ಮೆ | | ರ್ಮಾ | | ಣ | 5 ಭೂ |
| ಣ | 6 ರ | | 7 ರಿ | ಪು | |
| 8 ಸು | ಗ | ತ್ರಿ | | ರು | 9 ಕ |
| | ಳೆ | | 10 ಭೂ | ಷ | ಣ |

## ಎಡದಿಂದ ಬಲಕ್ಕೆ:

1) ತಾವರೆಯಂತೆ  ಮುಖವುಳ್ಳವ (6)
5) ಚಲಿಸುವ ಪ್ರಾಣಿಗೆ ಈ ನಾಮ (2)
6) ನಮಸ್ಕರಿಸಲು ಬೇಕಾದ ಭಾವ (2)
7) ರಹಸ್ಯ ವಿಷಯವಿದು ! (6)
11) ಮಂಗ ತಿರುಗಿದೆ! (3)
12) ದೇವರ ಅನುಗ್ರಹ ತಿರುಗಿ ಬಂದಿದೆ (2)




ಉತ್ತರ ಮುಂದಿನ ಸಂಚಿಕೆಯಲ್ಲಿ

## ಮೇಲಿನಿಂದ ಕೆಳಕ್ಕೆ:

1) ದಯಾ ಸಮುದ್ರನಿವ (6)
2) ಕಾಮನಂತೆ ಆಕರ್ಷಕ (6)
3) ಕಾಡನ್ನು ಹೊಂದಿದ ಮಾತು (3)
4) ಇದೂ ಶಂಖವೇ! (2)
8) ಕತೆಯಲ್ಲ ಕವನ (3)
9) ಚಾರನು ಮಾಡಿದ ಬಹಿರಂಗ (3)
10) ರವಿ ಬಂದಾಗ ಮಾಡಿದ ಶಬ್ದ (2)